ಕನ್ನಡ ಪೋಸ್ಟ್
KANNADA POST
ಇದು ಸುದ್ದಿ ವಿಳಾಸ
ಕನ್ನಡ ದಿನಪತ್ರಿಕೆ
ಸಂಪಾದಕ : ಮಂಜು ಬನವಾಸೆ
ಹಾಸನ E-mail : kannadapostnews@gmail.com / ಕನ್ನಡ post Price: ₹1
Vol.No.01 | Issue. 265 | Pages. 2 | Date: 05-09-2025, FRIDAY RNI NO: KARKAN/2024/89601 Kannada Daily
ಸಂಪುಟ : 01 - ಸಂಚಿಕೆ : 265 - ಪುಟಗಳು : 2 05-09-2025 ಶುಕ್ರವಾರ Ph: 8762954248 ದರ : ₹1

# ಬಿಸಿಯೂಟ ಗುಣಮಟ್ಟ ಪರಿಶೀಲಿಸಿದ ಡಿಸಿ

## ಗೊರೂರು ಶಾಲೆಗೆ ದಿಢೀರ್ ಭೇಟಿ | ಮಕ್ಕಳಿಂದ ಮಾಹಿತಿ ಸಂಗ್ರಹ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಅವರು ಗುರುವಾರ ತಾಲ್ಲೂಕಿನ ಗೊರೂರು ಸರ್ಕಾರಿ ಪ್ರಾಥಮಿಕ ಶಾಲೆಗೆ ಭೇಟಿ ನೀಡಿ ಬಿಸಿಯೂಟದ ಗುಣಮಟ್ಟ ಪರಿಶೀಲಿಸಿದರು.

ಶಾಲಾ ಮಕ್ಕಳ ಜೊತೆ ಸರದಿ ಸಾಲಿನಲ್ಲಿ ಕುಳಿತು ಊಟ ಸೇವಿಸಿದ ಜಿಲ್ಲಾಧಿಕಾರಿ ನಿಮಗೆ ಹಾಲು ಇಷ್ಟನಾ, ಇಲ್ಲಿ ಕೊಡುತ್ತಿರುವ ಊಟ ಹೇಗಿದೆ, ರುಚಿಕರವಾಗಿರುತ್ತಾ ಎಂದು ಮಕ್ಕಳನ್ನು ಕೇಳಿದರು.

ಹೇಗಿದೆ ಊಟ, ಹಾಲು ಚೆನ್ನಾಗಿದೆಯಾ, ಗುಣಮಟ್ಟದ ಊಟ ಕೊಡುತ್ತಿದ್ದಾರಾ ಎಂದು ಮಕ್ಕಳಿಂದ ಮಾಹಿತಿ ಪಡೆದುಕೊಂಡರು. ಇವರು ನಮ್ಮ ಜಿಲ್ಲಾಧಿಕಾರಿ ಎಂಬುದನ್ನು ತಿಳಿಯದ ಮಕ್ಕಳು ಇರುವುದನ್ನು ವಿವರಿಸಿದರು.

ತುಂತುರು ಮಳೆ ನಡುವೆಯೂ ಜಿಲ್ಲಾಧಿಕಾರಿ ಅವರ ದಿಢೀರ್ ಭೇಟಿಯಿಂದ ಶಾಲಾ ಶಿಕ್ಷಕರು ಹಾಗೂ ಅಡುಗೆ ಸಿಬ್ಬಂದಿ ದಂಗಾದರು. ಇದೇ ವೇಳೆ ಮಕ್ಕಳಿಗೆ ಉತ್ತಮ ರೀತಿಯ ಆಹಾರ ನೀಡಿ ಎಂದು ಶಿಕ್ಷಕರು-ಸಿಬ್ಬಂದಿಗೆ ಸೂಚಿಸಿದರು.

ಜಿಲ್ಲಾಧಿಕಾರಿ ಅವರ ಈ ಕಾಳಜಿ ಹಾಗೂ ಆಡಳಿತ ವೈಖರಿಗೆ ಸ್ಥಳೀಯರು ಹಾಗೂ ಸಾರ್ವಜನಿಕರು ಮೆಚ್ಚುಗೆ ವ್ಯಕ್ತಪಡಿಸಿದರು. ಬಿಸಿಯೂಟ ಯೋಜನೆಯಡಿ ಸರ್ಕಾರ, ಶಾಲಾ ಮಕ್ಕಳಿಗೆ ನೀಡುವ ಆಹಾರ ಸಾಮಗ್ರಿ, ದುರ್ಬಳಕೆ ಆಗುತ್ತಿವೆ, ಗುಣಮಟ್ಟ ಹಾಗೂ ರುಚಿಕರವಾದ ಊಟ ಕೊಡುತ್ತಿಲ್ಲ ಎಂಬ ಆರೋಪ ಅನೇಕ ಕಡೆ ಇದೆ.

ಡಿಸಿ ಅವರು ಹೀಗೆ ದಿಢೀರ್ ಭೇಟಿ ನೀಡುವುದನ್ನು ಮುಂದುವರಿಸಿದರೆ ಎಲ್ಲ ಲೋಪದೋಷ ಇಲ್ಲವಾಗಿ, ಗ್ರಾಮೀಣ ಮಕ್ಕಳಿಗೆ ಗುಣಮಟ್ಟದ ರುಚಿಕರ ಊಟ ಸಿಗಲಿದೆ ಎಂಬುದು ಆಶಯ ವ್ಯಕ್ತಪಡಿಸಿದರು.

### ಸರ್ಕಾರಿ ಶಾಲೆಗೆ ಸೌಕರ್ಯ ಹೆಚ್ಚಲಿ

ಸರ್ಕಾರಿ ಶಾಲಾ ಮಕ್ಕಳ ಕಲಿಕೆಯಲ್ಲಿ ಗುಣಮಟ್ಟ ವೃದ್ಧಿಯಾಗಬೇಕೆಂದರೆ ಕೇವಲ ಶಿಕ್ಷಕರು ಶ್ರಮ ವಹಿಸಿದರೆ




ಸಾಲುವುದಿಲ್ಲ, ನಾಗರಿಕರು ಶಾಲೆಗೆ ಬೇಕಾದ ಅವಶ್ಯ ಸವಲತ್ತು ಕಲ್ಪಿಸುವ ಮೂಲಕ ಭವಿಷ್ಯದ ಪ್ರಜೆಗಳ ನಿರ್ಮಾಣಕ್ಕೆ ಕೈ ಜೋಡಿಸಬೇಕು ಎಂದು ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಸಲಹೆ ನೀಡಿದರು.

ನಗರದ ಪೆನ್ಷನ್ ಮೊಹಲ್ಲಾದಲ್ಲಿರುವ ಸರ್ಕಾರಿ ಉರ್ದು, ಇಂಗ್ಲಿಷ್ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ನಿವೃತ್ತ ಶಿಕ್ಷಕ ದಿ. ಸೈಯದ್ ಅಬ್ದುಲ್ ರಶೀದ್ ಸ್ಮರಣಾರ್ಥ ಹಮ್ಮಿಕೊಂಡಿದ್ದ ಶಾಲೆಗೆ ಬ್ಯಾಂಡ್ ಸೆಟ್ ಕೊಡುಗೆ ಸಮಾರಂಭದಲ್ಲಿ ಮಾತನಾಡಿ, ಬದುಕಿನಲ್ಲಿ ಬದಲಾವಣೆ ತರುವ ಮಹತ್ತರ ಘಟ್ಟವೆಂದರೆ ಅದು ಶಿಕ್ಷಣವಾಗಿದೆ. ಸರ್ಕಾರಿ ಶಾಲೆಗಳ ಬಲವರ್ಧನೆಗೆ ಎಲ್ಲರೂ ಕೈ ಜೋಡಿಸಬೇಕು. ಸರ್ಕಾರಿ ಶಾಲೆ ಉಳಿಸುವುದು, ಮಕ್ಕಳಿಗೆ ಶಿಕ್ಷಣ ನೀಡುವುದು ಕೇವಲ ಶಿಕ್ಷಕರು ಹಾಗೂ ಸಿಬ್ಬಂದಿ ಕೆಲಸವಲ್ಲ. ಪೋಷಕರು ಈ ನಿಟ್ಟಿನಲ್ಲಿ ಜವಾಬ್ದಾರಿ ನಿಭಾಯಿಸಬೇಕಾಗುತ್ತದೆ. ಆರ್ಥಿಕ ಸ್ಥಿತಿವಂತರು ಸರ್ಕಾರಿ ಶಾಲೆಗಳಿಗೆ ಕೈಲಾದ ಸಹಾಯ ಮಾಡಬೇಕು ಎಂದರು.

ವಿದ್ಯಾರ್ಥಿಗಳು ಸ್ವಾವಲಂಬಿ ಜೀವನಕ್ಕೆ ಆದ್ಯತೆ ನೀಡಬೇಕು. ಹೆಣ್ಣು ಮಕ್ಕಳು ಉತ್ತಮ ವ್ಯಾಸಂಗದ ಮೂಲಕ ಬದುಕು ಕಟ್ಟಿಕೊಳ್ಳಬೇಕು. ಕುಟುಂಬಸ್ಥರಿಗೆ ಹೊರೆಯಾಗದೆ ಬೆಳೆಯಬೇಕು. ಹದಿಹರೆಯದ ವಯಸ್ಸಿನಲ್ಲಿ ಪ್ರೀತಿ ಪ್ರೇಮದ ಆಕರ್ಷಣೆಗೆ ಒಳಗಾಗಿ ಓದಿನ ಕಡೆಗೆ ಗಮನ ಕಡಿಮೆ ಮಾಡುವ ಸಾಧ್ಯತೆ ಹೆಚ್ಚಿರುತ್ತದೆ. ಅದಕ್ಕೆ ಅವಕಾಶ ಮಾಡಿಕೊಡದೆ ಜೀವನದಲ್ಲಿ ಮಹತ್ವದ ಗುರಿ ಇಟ್ಟುಕೊಂಡು ಸಾಧನೆಯತ್ತ ಗಮನ ಹರಿಸಬೇಕು. ಬಾಲಕರು ಒಳಿತು ಕೆಡಕುಗಳ ಕುರಿತು ಅರಿವು ಹೊಂದಿರಬೇಕು. ದುಶ್ಚಟಗಳಿಗೆ ಯಾವ ಕಾರಣಕ್ಕೂ ದಾಸರಾಗಬಾರದೆಂದು ಸಲಹೆ ನೀಡಿದರು.



ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕ ಕೆ.ಎಂ. ಬಲರಾಮ್, ಕ್ಷೇತ್ರ ಶಿಕ್ಷಣಾಧಿಕಾರಿ ಕೆ. ರಂಗನಾಥ್, ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿ ಕಾಂತರಾಜು, ಜನಪ್ರಿಯ ಆಸ್ಪತ್ರೆ ಮುಖ್ಯಸ್ಥ ಡಾ. ಅಬ್ದುಲ್ ಬಶೀರ್, ಮಹಾನಗರ ಪಾಲಿಕೆ ಸದಸ್ಯ ರಫೀಕ್ ಅಹಮದ್, ಆಲೆ-ಅಮೀನ್ ಶಿಕ್ಷಣ ಸಂಸ್ಥೆಯ ಸಯ್ಯದ್ ತಾಜ್, ಪತ್ರಕರ್ತರಾದ ಆರ್.ಪಿ. ವೆಂಕಟೇಶ್ ಮೂರ್ತಿ, ರವಿ ನಾಕಲಗೂಡು, ಅತೀಖು ರೆಹಮಾನ್, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷೆ ಚೈತ್ರಾ ಮಂಜೇಗೌಡ, ಕಸಾಪ ಮಾಜಿ ಜಿಲ್ಲಾಧ್ಯಕ್ಷ ನಾಯಕರಹಳ್ಳಿ ಮಂಜೇಗೌಡ ಇತರರು ಇದ್ದರು.

# ಬಾನು ಮುಷ್ತಾಕ್ ಆಯ್ಕೆ ಆಹ್ವಾನ ಹಿಂಪಡೆಯಲು ಒತ್ತಾಯ


**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ವಿಶ್ವವಿಖ್ಯಾತ ಮೈಸೂರು ದಸರಾ ಉದ್ಘಾಟನೆಗೆ ಸಾಹಿತಿ ಬಾನು ಮುಷ್ತಾಕ್ ಅವರ ಆಯ್ಕೆ ರದ್ದುಪಡಿಸಿ ಬೇರೆಯವರ ನಿಯೋಜಿಸಬೇಕು ಎಂದು ಹಿಂದು ಜನಜಾಗೃತಿ ಸಮಿತಿ ಒತ್ತಾಯಿಸಿದೆ.

ಜಿಲ್ಲಾಧಿಕಾರಿ ಮೂಲಕ ರಾಜ್ಯ ಸರ್ಕಾರಕ್ಕೆ ಗುರುವಾರ ಮನವಿ ಸಲ್ಲಿಸಲಾಯಿತು.

ಸಮಿತಿ ಮುಖಂಡ ಅನಂತರಾಜು ಮಾತನಾಡಿ, ಅಂತಾರಾಷ್ಟ್ರೀಯ ಬೂಕರ್ ಪ್ರಶಸ್ತಿ ಪುರಸ್ಕೃತ ಬಾನು ಮುಷ್ತಾಕ್ ಅವರನ್ನು ದಸರಾ ಉದ್ಘಾಟನೆಗೆ ಆಹ್ವಾನಿಸಿರುವುದು ಹಿಂದುಗಳಿಗೆ ಅಪಮಾನ ಮಾಡಿದಂತಾಗಿದೆ. ಬಾನು ಮುಷ್ತಾಕ್ ಮುಸ್ಲಿಂ ಸಮುದಾಯಕ್ಕೆ ಸೇರಿದವರೆಂಬ ಕಾರಣಕ್ಕೆ ವಿರೋಧಿಸುತ್ತಿಲ್ಲ. ಕವಿ ನಿಸಾರ್ ಅಹಮದ್ ಅವರು ದಸರಾ ಉದ್ಘಾಟಿಸಿದಾಗ ಎಲ್ಲರೂ ಸ್ವಾಗತಿಸಿದ್ದೆವು. ಆದರೆ ಬಾನು ಮುಷ್ತಾಕ್ ವಿಚಾರದಲ್ಲಿ ವೈರುಧ್ಯಗಳಿವೆಯೆಂದರು.

ಮೈಸೂರು ದಸರಾ ಕೇವಲ ಸಾಂಸ್ಕೃತಿಕ ಹಬ್ಬವಲ್ಲ, ನವರಾತ್ರಿಯ ಒಂಬತ್ತು ದಿನಗಳಲ್ಲಿ ಕಾಳಿ, ಮಹಾಲಕ್ಷ್ಮಿ ಮತ್ತು ಸರಸ್ವತಿ ದೇವಿಯ ಆರಾಧನೆ ನಡೆಯುತ್ತದೆ. ವಿಜಯ ದಶಮಿಯಂದು ಚಾಮುಂಡೇಶ್ವರಿ ದೇವಿ ಮಹಿಷಾಸುರನ ಸಂಹಾರ ಮಾಡಿದ ನೆನಪಿಗಾಗಿ ವಿಜಯೋತ್ಸವ ಆಚರಿಸಲಾಗುತ್ತದೆ. ಅಂತಹ ಪವಿತ್ರ ಹಬ್ಬದ ಉದ್ಘಾಟನೆಗೆ



ಆಯ್ಕೆಯಾಗುವವರು ನಾಡದೇವಿ ಮೇಲೆ ಗೌರವ ಹೊಂದಿರಬೇಕು. ಬಾನು ಮುಷ್ತಾಕ್ ಭುವನೇಶ್ವರಿ ದೇವಿಯನ್ನು ನಂಬುವುದಿಲ್ಲವೆಂದು ಹೇಳಿರುವುದು, ಜೊತೆಗೆ ದತ್ತಪೀಠ ಹೋರಾಟದ ಸಂದರ್ಭದಲ್ಲೂ ಮುಸ್ಲಿಂ ಪರವಾಗಿ ನಿಲುವು ತಳೆದಿರುವುದು ಭಕ್ತರಲ್ಲಿ ಅಸಮಾಧಾನ ಉಂಟುಮಾಡಿದೆ. ಭುವನೇಶ್ವರಿ ಕುರಿತು ಅವಹೇಳನಕಾರಿಯಾಗಿ ಮಾತನಾಡಿರುವ ಬಾನು ಮುಷ್ತಾಕ್ ಮುಂದೊಂದು ದಿನ ಚಾಮುಂಡೇಶ್ವರಿ ಬಗ್ಗೆಯೂ ಹಗುರವಾಗಿ ಮಾತನಾಡಬಹುದು. ಈ ವಿಚಾರದಲ್ಲಿ ಸರ್ಕಾರ ನಿಲುವು ಬದಲಿಸಬೇಕೆಂದು ಒತ್ತಾಯಿಸಿದರು.

ಹಿಂದು ಜನಜಾಗೃತಿ ಸಮಿತಿಯ ಸುಜಾತಾ, ಗೋವಿಂದರಾಜು, ಪ್ರಕಾಶ್, ವೇದ, ಲಕ್ಷ್ಮೀ, ಪುಷ್ಪಾ, ದೇವಿಕ ಮತ್ತಿತರರಿದ್ದರು.

# ಕ್ರೀಡಾಕೂಟ: ಯಸಳೂರು ಶಾಲೆಗೆ ಸಮಗ್ರ ಪ್ರಶಸ್ತಿ



ಸಕಲೇಶಪುರ: ಹೋಬಳಿ ಮಟ್ಟದ ಕ್ರೀಡಾಕೂಟದಲ್ಲಿ ತಾಲ್ಲೂಕಿನ ಯಸಳೂರು ಡಾ. ಬಿ.ಆರ್. ಅಂಬೇಡ್ಕರ್ ವಸತಿ ಶಾಲೆ ಸಮಗ್ರ ಪ್ರಶಸ್ತಿ ಪಡೆದಿದೆ.

ಬಾಲಕರ ವಿಭಾಗದಲ್ಲಿ 300 ಮೀ. ಓಟ, 1500 ಮೀ. ಓಟ, 100 ಮೀ. ಓಟ, 4★100 ರಿಲೇ, ಉದ್ದ ಜಿಗಿತ, ಶಾಟ್‌ಪುಟ್, ಟ್ರಿಪಲ್ ಜಂಪ್, ಹೈಜಂಪ್, ಹ್ಯಾಮರ್ ಥ್ರೋ, ಡಿಸ್ಕ್ ಥ್ರೋ, ಜಾವೆಲಿನ್ ಥ್ರೋ, ಖೋ-ಖೋ, ವಾಲಿಬಾಲ್, ಬಾಲ್ ಬ್ಯಾಡ್ಮಿಂಟನ್‌ನಲ್ಲಿ ಪ್ರಥಮ ಸ್ಥಾನ ಪಡೆದಿದೆ. ಅದೇ ರೀತಿ 300, 400 ಮೀಟರ್ ಓಟ, ಟ್ರಿಪಲ್ ಜಂಪ್, ಹೈಜಂಪ್, ಶಾಟ್‌ಪುಟ್, ಹ್ಯಾಮರ್ ಥ್ರೋ, ಡಿಸ್ಕಸ್ ಥ್ರೋ, ಜಾವೆಲಿನ್, ಕಬಡ್ಡಿ, ಥ್ರೋಬಾಲ್ ಹಾಗು 800 ಮೀ ಓಟದಲ್ಲಿ ದ್ವಿತೀಯ ಸ್ಥಾನ ಪಡೆದು ಶಾಲೆಯ ವಿದ್ಯಾರ್ಥಿಗಳು ಕೀರ್ತಿ ತಂದಿದ್ದಾರೆ.

ಬಾಲಕಿಯರ ವಿಭಾಗದಲ್ಲಿ 300 ಮೀ., 1500 ಮೀ. ಓಟ, 4★100 ರಿಲೇ, ಟ್ರಿಪಲ್ ಜಂಪ್, ಹೈಜಂಪ್, ಹ್ಯಾಮರ್ ಥ್ರೋ, ಡಿಸ್ಕ್ ಥ್ರೋ, ಜಾವೆಲಿನ್ ಥ್ರೋ, ಖೋ-ಖೋ, ವಾಲಿಬಾಲ್, ಕಬಡ್ಡಿ ಪಂದ್ಯದಲ್ಲಿ ಪ್ರಥಮ ಸ್ಥಾನ ಗಳಿಸಿದ್ದಾರೆ. 3000 ಮೀ., 800 ಮೀ., 400 ಮೀ. ಹಾಗು 100 ಮೀ. ಓಟ, ಶಾಟ್‌ಪುಟ್, ಹೈಜಂಪ್, ಲಾಂಗ್ ಜಂಪ್, ಟ್ರಿಪಲ್ ಜಂಪ್, ಬಾಲ್ ಬ್ಯಾಡ್ಮಿಂಟನ್, ಡಿಸ್ಕಸ್ ಥ್ರೋ ಹಾಗು ಹ್ಯಾಮರ್ ಥ್ರೋ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ ಪಡೆದಿದ್ದಾರೆ. ವಿದ್ಯಾರ್ಥಿಗಳ ಕ್ರೀಡಾ ಸಾಧನೆಗೆ ಶಿಕ್ಷಕರು ಹಾಗೂ ಬೋಧಕೇತರ ಸಿಬ್ಬಂದಿ ಅಭಿನಂದನೆ ಸಲ್ಲಿಸಿದ್ದಾರೆ.

# ತ್ಯಾಜ್ಯ ವಿಲೇವಾರಿ ಘಟಕ ಉದ್ಘಾಟನೆಗೆ ಸಮಯ ಕೋರಿದ ಶಾಸಕ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಸಮೀಪದ ಮಳಲಿ ಗ್ರಾಮದಲ್ಲಿ ನಿರ್ಮಾಣವಾಗಿರುವ ತ್ಯಾಜ್ಯ ವಿಲೇವಾರಿ ಘಟಕ ಉದ್ಘಾಟನೆಗೆ ಸಮಯ ನೀಡುವಂತೆ ಶಾಸಕ ಸಿಮೆಂಟ್ ಮಂಜು ಅವರು ಗುರುವಾರ ಪೌರಾಡಳಿತ ಸಚಿವ ರಹೀಮ್ ಖಾನ್ ಅವರನ್ನು ಭೇಟಿಯಾಗಿ ಮನವಿ ಮಾಡಿದರು.

ಬೆಂಗಳೂರಿನ ವಿಧಾನಸೌಧದಲ್ಲಿ ಮನವಿ ಸಲ್ಲಿಸಿದ ಅವರು, ಪಟ್ಟಣದಲ್ಲಿ ಪುರಸಭೆಯ ಘನ ತ್ಯಾಜ್ಯ ವಿಲೇವಾರಿ ಸಮಸ್ಯೆ ಮಿತಿ ಮೀರಿದ್ದು ಕಸ ಹಾಕಲು ಜಾಗ ಇಲ್ಲದಂತಾಗಿದೆ. ಪಟ್ಟಣದಲ್ಲಿ ಎಲ್ಲೆಲ್ಲೂ ತ್ಯಾಜ್ಯ ಬಿದ್ದು ದುರ್ನಾತ ಬೀರುತ್ತಿದೆ. ಪಟ್ಟಣಕ್ಕೆ ಸಮೀಪದಲ್ಲಿರುವ ಮಳಲಿ ಗ್ರಾಮದಲ್ಲಿ ಪುರಸಭೆಯ ಘನತಾಜ್ಯ ವಿಲೇವಾರಿ ಘಟಕದ ಕಾಮಗಾರಿ ಬಹುತೇಕ ಮುಗಿದಿದೆ. ತಾವು ಉದ್ಘಾಟನೆಗೆ ಸಮಯ ನೀಡಿದರೆ ಕಾರ್ಯಕ್ರಮಕ್ಕೆ ಸಿದ್ಧತೆ ಮಾಡಿಕೊಳ್ಳಲಾಗುವುದೆಂದರು. ಪಟ್ಟಣದ ಜಾತ್ರ ಮೈದಾನದಲ್ಲಿ ಸಾವಿರಾರು ಟನ್ ಪುರಸಭೆಯ ತ್ಯಾಜ್ಯವಿದ್ದು ಅದನ್ನು ಸಹ ಪುರಸಭೆ ವತಿಯಿಂದ ವಿಲೇವಾರಿ ಮಾಡಲು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಶಾಸಕ ಸಿಮೆಂಟ್ ಮಂಜು ಮನವಿ ಮಾಡಿದರು.

# ಸೆ.7 ರಂದು ಮೈಸೂರಿನಲ್ಲಿ ಚಿಂತನ ಮಂಥನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಭಗೀರಥ ಶೈಕ್ಷಣಿಕ ಮತ್ತು ಚಾರಿಟಬಲ್ ಟ್ರಸ್ಟ್ ವತಿಯಿಂದ ಸೆ. 7ರ ಭಾನುವಾರ ಮೈಸೂರಿನಲ್ಲಿ ಚಿಂತನ ಮಂಥನ ಸಭೆ ನಡೆಯಲಿದೆಯೆಂದು ಭಗೀರಥ ಶೈಕ್ಷಣಿಕ ಮತ್ತು ಚಾರಿಟಬಲ್ ಟ್ರಸ್ಟ್ ಸದಸ್ಯ, ಹಾಸನ ಜಿಲ್ಲಾ ಸಂಯೋಜಕ ಹೊಯ್ಸಳ ಕೋಣನೂರು ಅವರು ತಿಳಿಸಿದ್ದಾರೆ.

ಸೆ. ಪ್ಟೆಂಬರ್ 7 ರಂದು ಮೈಸೂರಿನ ಸರಸ್ವತಿ ಪುರಂನಲ್ಲಿರುವ ಉಪ್ಪಾರ ವಿದ್ಯಾರ್ಥಿ ನಿಲಯದಲ್ಲಿ ಮ್ಯಾನೇಜಿಂಗ್ ಟ್ರಸ್ಟಿಗಳಾದ ಪಿ.ಶಿವಶಂಕರ್ ಅಧ್ಯಕ್ಷತೆಯಲ್ಲಿ ಬೆಳಿಗ್ಗೆ 11 ಗಂಟೆಗೆ ಚಿಂತನ ಮಂಥನ ಸಭೆ ಹಾಗು ಮಧ್ಯಾಹ್ನ 2 ಗಂಟೆಗೆ ಟ್ರಸ್ಟಿನ ಸರ್ವ ಸದಸ್ಯರ ಸಭೆ ನಡೆಯಲಿದೆ. ಈ ಸಭೆಗೆ ಸಮಾಜ ಭಾಂದವರು ಭಾಗವಹಿಸಿ ಸಮಾಜದ ಏಳಿಗೆಯ ಕುರಿತ ಚಿಂತನ ಮಂಥನ ಸಭೆಯಲ್ಲಿ ಭಾಗವಹಿಸಬೇಕೆಂದು ಕೋರಿದ್ದಾರೆ.

ಭಗೀರಥ ಶೈಕ್ಷಣಿಕ ಮತ್ತು ಚಾರಿಟಬಲ್ ಟ್ರಸ್ಟ್ ಉಪ್ಪಾರ ಸಮಾಜದ ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಮತ್ತು ಔದ್ಯೋಗಿಕ ಏಳಿಗೆಗೆ ಕಂಕಣಬದ್ಧವಾಗಿದ್ದು ಸಮಾಜದ ಪ್ರತಿಭಾವಂತ ಬಡ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವನ್ನು ನೀಡುತ್ತಾ ಬಂದಿದೆ. 2024-25ನೇ ಸಾಲಿನಲ್ಲಿ ವೈದ್ಯಕೀಯ, ಇಂಜಿನಿಯರಿಂಗ್, ಆಯುರ್ವೇದಿಕ್, ಕೃಷಿ, ತೋಟಗಾರಿಕೆ, ಬಿ ಫಾರ್ಮಾ, ಪ್ಯಾರಾಮೆಡಿಕಲ್, ಬಿಇಡಿ, ಕಾನೂನು, ಸ್ನಾತಕೋತ್ತರ ಕೋರ್ಸ್‌ಗಳನ್ನು ವ್ಯಾಸಂಗ ಮಾಡುತ್ತಿರುವ ರಾಜ್ಯದ 4 ವಿವಿಧ ಜಿಲ್ಲೆಗಳಿಗೆ ಸೇರಿದ 128 ಪ್ರತಿಭಾವಂತ ಬಡ ವಿದ್ಯಾರ್ಥಿಗಳಿಗೆ ಸುಮಾರು 23 ಲಕ್ಷ ರೂ. ಆರ್ಥಿಕ ನೆರವನ್ನು ನೀಡಲಾಗಿದೆ. ಮಾಹಿತಿಗೆ ಮೊ. ಸಂ. 9844590624 ಸಂಪರ್ಕಿಸಲು ಕೋರಲಾಗಿದೆ.

# ರಕ್ತದಾನ ಮಾಡಿ ಜೀವ ಉಳಿಸಿ: ಸಿಮೆಂಟ್ ಮಂಜು



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಆರೋಗ್ಯವಂತರು ನಿಯಮಿತವಾಗಿ ರಕ್ತದಾನ ಮಾಡುವುದರಿಂದ ಆರೋಗ್ಯ ಕಾಪಾಡಿಕೊಳ್ಳಬಹುದು ಮಾತ್ರವಲ್ಲದೆ ಇನ್ನೊಬ್ಬರ ಜೀವ ಉಳಿಸಿದ ಪುಣ್ಯಕ್ಕೂ ಪ್ರಾಪ್ತರಾಗಬಹುದು ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.

ಪಟ್ಟಣದ ಲಯನ್ಸ್ ಸಭಾಂಗಣದಲ್ಲಿ ಲಯನ್ಸ್ ಕ್ಲಬ್, ಜಿಲ್ಲಾ ಜನಜಾಗೃತಿ ವೇದಿಕೆ, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಹಾಗೂ ಹಾಸನ ಜೀವ ರಕ್ತನಿಧಿ ವತಿಯಿಂದ ಗುರುವಾರ ಹಮ್ಮಿಕೊಂಡಿದ್ದ ರಕ್ತದಾನ ಶಿಬಿರ ಉದ್ಘಾಟಿಸಿ ಮಾತನಾಡಿ, ರಕ್ತಕ್ಕೆ ಪರ್ಯಾಯವಿಲ್ಲ. ಆರೋಗ್ಯವಂತರು ನಿಯಮಿತವಾಗಿ ರಕ್ತದಾನ ಮಾಡಿದರೆ ಅನೇಕ ಜೀವ ಉಳಿಸಬಹುದು. ಮನುಷ್ಯನಿಗೆ ಏನು ಇಲ್ಲದಿದ್ದರೂ ಪರವಾಗಿಲ್ಲ, ಆದರೆ ಆರೋಗ್ಯ ಉತ್ತಮವಾಗಿರಬೇಕು. ಆರೋಗ್ಯವೇ ಭಾಗ್ಯ. ವೈದ್ಯರು ದೇವರ ಸಮಾನರು. ತಮ್ಮ ಆರೋಗ್ಯವನ್ನು ಮರೆತು ಇತರರ ಜೀವ ಉಳಿಸಲು ಶ್ರಮಿಸುತ್ತಾರೆ. ಇಂತಹ ಶಿಬಿರಗಳು ಇನ್ನಷ್ಟು ನಡೆಯಲಿ ಎಂದು ಹೇಳಿದರು.

ಲಯನ್ಸ್ ಸಂಸ್ಥೆ ತಾಲ್ಲೂಕು ಅಧ್ಯಕ್ಷ ಮಂಜುನಾಥ್ ಮಾತನಾಡಿ, ತಾಲ್ಲೂಕು ಲಯನ್ಸ್ ಸಂಸ್ಥೆಯು ನಿರಂತರವಾಗಿ ಜನಪರ ಕಾರ್ಯಕ್ರಮ ಕೈಗೊಳ್ಳುತ್ತಿದೆ. ಕಡಿಮೆ ಅವಧಿಯಲ್ಲಿ ಡಾ. ನವೀನ್ ಚಂದ್ರಶೆಟ್ಟಿ ಅವರ ಬಯಕೆಯಂತೆ ಈ ಶಿಬಿರ ಆಯೋಜನೆಯಾಗಿದೆ ಎಂದು ಹೇಳಿದರು.

ಡಾ. ನವೀನ್ ಚಂದ್ರಶೆಟ್ಟಿ ಮಾತನಾಡಿ, ರಕ್ತದಾನದ ಮೂಲಕ ಅಪಘಾತದಲ್ಲಿ ಗಾಯಗೊಂಡವರು, ಹೆರಿಗೆ ಸಂದರ್ಭದ ತಾಯಂದಿರು, ಹೃದಯ ಹಾಗು ಮೂತ್ರಪಿಂಡದ ಗಂಭೀರ ಶಸ್ತ್ರಚಿಕಿತ್ಸೆಗೆ ಒಳಗಾಗುವವರು, ರಕ್ತಹೀನತೆಯಿಂದ ಬಳಲುವ ಮಕ್ಕಳು ಇವರೆಲ್ಲರಿಗೂ ಜೀವ ದೊರೆಯುತ್ತದೆ ಎಂದು ತಿಳಿಸಿದರು.

ವೈದ್ಯಕೀಯ ತಜ್ಞರ ಪ್ರಕಾರ, ಆರೋಗ್ಯವಂತ ವ್ಯಕ್ತಿಯು ನಿಯಮಿತವಾಗಿ ರಕ್ತದಾನ ಮಾಡಿದರೆ ದೇಹದಲ್ಲಿ ಹೊಸ ರಕ್ತಕಣಗಳ ಉತ್ಪತ್ತಿಯಾಗುತ್ತದೆ. ಅದರಿಂದ ರಕ್ತ ಸಂಚಾರದ ದೋಷ ಕಡಿಮೆಯಾಗುತ್ತದೆ. ಹೃದಯ ರೋಗಗಳ ಸಂಭವ ತಗ್ಗುತ್ತದೆ. ರಕ್ತದಾನ ಮಾಡುವವನು ಕೇವಲ ಮತ್ತೊಬ್ಬರಿಗೆ ಜೀವ ನೀಡುವುದಲ್ಲ, ತನ್ನ ಆರೋಗ್ಯವನ್ನು ಕಾಪಾಡಿಕೊಳ್ಳುತ್ತಾನೆಂದರು. ಕಾರ್ಯಕ್ರಮದಲ್ಲಿ ಲಯನ್ಸ್ ಸಂಸ್ಥೆಯ ಮಾಜಿ ರಾಜ್ಯಪಾಲ ಸಂಜೀತ್ ಶೆಟ್ಟಿ, ಕಾರ್ಯದರ್ಶಿ ಬಸವರಾಜ್, ಖಜಾಂಚಿ ಜಗದೀಶ್, ಪದಾಧಿಕಾರಿಗಳಾದ ಪ್ರಸನ್ನ ಕುಮಾರ್, ವಿಠ್ಠಲ್, ದಿವಾಕರ್, ವೆಂಕಟೇಶ್, ಜೀವ ರಕ್ತನಿಧಿಯ ಡಾ. ಮೋಹನ್, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ರಾಜೇಶ್ ಹಾಗೂ ಇತರರಿದ್ದರು.

# ಪತ್ರಿಕಾ ವಿತರಕರಿಗೆ ಸೌಲಭ್ಯ ತಲುಪಲಿ: ಕೋಡಿಶ್ರೀ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಸೀಕೆರೆ: ಜಗತ್ತಿನ ಆಗು ಹೋಗುಗಳನ್ನು ಮನೆ ಮನೆಗೆ ತಲುಪಿಸುವ ಪತ್ರಿಕಾ ವಿತರಕರ ಸೇವೆ ಶ್ಲಾಘನೀಯವಾಗಿದ್ದು ಅವರಿಗೆ ಅಗತ್ಯ ಸೌಲಭ್ಯ ಕಲ್ಪಿಸುವುದು ಸರ್ಕಾರ ಹಾಗೂ ಸಂಘ ಸಂಸ್ಥೆಗಳ ಜವಾಬ್ದಾರಿ ಎಂದು ಹಾರನಹಳ್ಳಿ ಕೋಡಿಮಠದ ಡಾ. ಶ್ರೀ ಶಿವಾನಂದ ಶಿವಯೋಗಿ ರಾಜೇಂದ್ರ ಸ್ವಾಮೀಜಿ ಹೇಳಿದರು.

ವಿಶ್ವ ಪತ್ರಿಕಾ ವಿತರಕರ ದಿನಾಚರಣೆ ಅಂಗವಾಗಿ ಶ್ರೀ ಮಠಕ್ಕೆ ಗುರುವಾರ ಭೇಟಿ ನೀಡಿದ್ದ ಪತ್ರಿಕಾ ವಿತರಕರಿಗೆ ಟಿ ಶರ್ಟ್ ವಿತರಿಸಿ ಮಾತನಾಡಿ, ಪತ್ರಕರ್ತ ಸುದ್ದಿಯನ್ನು ಹೆಕ್ಕಿ ತಂದರೆ, ಪತ್ರಿಕಾ ವಿತರಕರು ಪತ್ರಿಕೆಯನ್ನು ಮನೆ ಬಾಗಿಲಿಗೆ ತಲುಪಿಸಿ ಜ್ಞಾನ ಉಣಬಡಿಸುತ್ತಾರೆ. ಸಮಾಜ ಜಾಗೃತಿಗೊಳಿಸುವಲ್ಲಿ ಇಬ್ಬರ ಜವಾಬ್ದಾರಿ ಮಹತ್ವದ್ದಾಗಿದೆಯೆಂದು ಹೇಳಿದರು.

ಯಾವ ಕೆಲಸದಲ್ಲೂ ಮೇಲು ಕೀಳು ಎಂಬುದಿಲ್ಲ. ನಮ್ಮ ಬದುಕು ಹಾಗು ಸಮಾಜಕ್ಕೆ ಒಳಿತಾಗುವ ಯಾವ ಕೆಲಸ ಮಾಡಿದರೂ ಅದನ್ನು ಜನರು ಮಾತ್ರವಲ್ಲ ಜನಾರ್ಧನ ಮೆಚ್ಚುತ್ತಾನೆಂದರು.

ತಾಲ್ಲೂಕು ಕಾರ್ಯನಿರತ ಪತ್ರಕರ್ತರ ಸಂಘ ಹಾಗೂ ಪತ್ರಿಕಾ ವಿತರಕರ ಸಂಘದಿಂದ ನಗರದ ಪಿಪಿ ವೃತ್ತದಲ್ಲಿ ವಿಶ್ವ ಪತ್ರಿಕಾ ವಿತರಕರ ದಿನಾಚರಣೆಯನ್ನು ಕೇಕ್ ಕತ್ತರಿಸುವ ಮೂಲಕ ಆಚರಿಸಲಾಯಿತು.

ಉದ್ಯಮಿ ರಾಘು ಮಾತನಾಡಿ, ಮಳೆ, ಚಳಿ, ಗಾಳಿ ಎನ್ನದೆ ಸುರ್ಯೋದಯಕ್ಕೂ ಮೊದಲೇ ಮುಟ್ಟಿಸುವ ಮೂಲಕ ಸಮಾಜದ ಬೆಳವಣಿಗೆ ಕಾರಣೀಕರ್ತರಾಗಿರುವ ಪತ್ರಿಕಾ ವಿತರಕರ ಸೇವೆಗೆ ಬೆಲೆ ಕಟ್ಟಲು ಸಾಧ್ಯವಿಲ್ಲ ಎಂದರು.

ಮಾಜಿ ರಾಷ್ಟ್ರಪತಿ ದಿ. ಅಬ್ದುಲ್ ಕಲಾಂ ಸಹ ಮುಂಜಾನೆ ಪತ್ರಿಕೆ ಹಂಚುತ್ತಿದ್ದರು ಎಂಬುದನ್ನು ವಿತರಕರು ಅರಿಯಬೇಕು. ಅವರಂತೆ ತಾವೂ ಸಹ ಉತ್ತಮ ವಿದ್ಯಾಭ್ಯಾಸ ಮಾಡಿ ಸಮಾಜದಲ್ಲಿ ಉನ್ನತ ಸ್ಥಾನಮಾನ ಪಡೆಯಿರಿ ಎಂದರು.


# ನಿಸ್ವಾರ್ಥ ಮನೋಭಾವದ ಶಿಕ್ಷಕನಿಗೆ ಒಲಿದ ರಾಜ್ಯ ಪ್ರಶಸ್ತಿ

## ಮಕ್ಕಳಲ್ಲೇ ದೇವರ ಕಂಡ ಅಪರೂಪದ ಗುರು | ಮಕ್ಕಳ ಕರೆತರಲು ಸ್ವಂತ ವಾಹನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಆಲೂರು ತಾಲ್ಲೂಕು ಸುಳಗೋಡು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮುಖ್ಯ ಶಿಕ್ಷಕ ಕೆ.ಎಲ್. ಪುರುಷೋತ್ತಮ ರಾಜ್ಯ ಮಟ್ಟದ ಶಿಕ್ಷಕ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ಸೆ. 5ರ ಶುಕ್ರವಾರ ಶಿಕ್ಷಕರ ದಿನಾಚರಣೆಯಂದು ಬೆಂಗಳೂರಿನಲ್ಲಿ ರಾಜ್ಯ ಮಟ್ಟದ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ಸ್ವೀಕರಿಸಲಿದ್ದಾರೆ. ಬಾಲ್ಯದಲ್ಲಿ ಶಿಕ್ಷಣದಿಂದ ವಿಮುಖರಾಗಿ ಈಗ ವಿದ್ಯೆ ಕಲಿಸುವ ಗುರುವಾಗಿ, ಮಕ್ಕಳ ಪಾಲಿನ ಆಪದ್ಬಾಂಧವರಾಗಿ ಸರ್ಕಾರಿ ಶಾಲೆ ಉಳಿಯಬೇಕೆಂದು ಪಣ ತೊಟ್ಟು ವೈಯಕ್ತಿಕ ಬದುಕಿನ ಜೊತೆಗೆ ಶಾಲೆಯ ಏಳಿಗೆಗೂ ಶ್ರಮ ವಹಿಸುತ್ತಿದ್ದಾರೆ. ಪುರುಷೋತ್ತಮ ಅವರ ಯಶೋಗಾಥೆ ಶ್ಲಾಘನೀಯವಾಗಿದೆ. ಮಲೆನಾಡು ಭಾಗದಲ್ಲಿ ಕಾಡಾನೆಗಳ ಹಾವಳಿ, ಖಾಸಗಿ ಶಾಲೆಗಳ ಮೇಲಿನ ವ್ಯಾಮೋಹ ಹಾಗೂ ಸರ್ಕಾರಿ ಶಾಲೆಗಳಲ್ಲಿ ಸೌಕರ್ಯಗಳ ಕೊರತೆಯಿಂದ ವರ್ಷದಿಂದ ವರ್ಷಕ್ಕೆ ಸುಳಗೋಡು ಶಾಲೆಯಲ್ಲಿ ಮಕ್ಕಳ ದಾಖಲಾತಿ ಕುಸಿಯುತ್ತಲೇ ಇತ್ತು.



ಇಂದು ಶಿಕ್ಷಕರ ದಿನಾಚರಣೆ

2019ರ ಜೂನ್ 11ರಂದು ವರದಿ ಮಾಡಿಕೊಂಡ ಪುರುಷೋತ್ತಮ ಅವರು ಶಾಲೆಯ ವ್ಯವಸ್ಥೆ ಕಂಡು ಅದಕ್ಕೆ ಬೇರೆ ರೂಪ ಕಲ್ಪಿಸಬೇಕೆಂದು ನಿರ್ಧರಿಸಿದರು. ಶಾಲೆಗೆ ಅಗತ್ಯ ಸೌಕರ್ಯ ಕಲ್ಪಿಸಿದರೆ, ಗುಣಮಟ್ಟದ ಕಲಿಕೆ ಅಳವಡಿಸಿಕೊಂಡರೆ ಪೋಷಕರು ತಮ್ಮ ಮಕ್ಕಳನ್ನು ಸೇರಿಸುತ್ತಾರೆಂದು ಆ ನಿಟ್ಟಿನಲ್ಲಿ ಮುತುವರ್ಜಿ ವಹಿಸಿ ಹಲವು ಯೋಜನೆ ರೂಪಿಸಿದರು. ಈ ಹಿಂದೆ ಕೆರೆಹಳ್ಳಿ ಪೂರ್ವ ಪ್ರಾಥಮಿಕ ಶಾಲೆಯಲ್ಲಿ 11 ವರ್ಷ, ಹುಣಸವಳ್ಳಿಯಲ್ಲಿ 3 ವರ್ಷ ಕೆಲಸ ಮಾಡಿದ್ದ ಅವರು ಮಕ್ಕಳ ಕಲಿಕೆಗೆ ಪೂರಕ ವಾತಾವರಣ ಸೃಷ್ಟಿಸಿದ್ದರು. ಅದೇ ಸಂಪ್ರದಾಯವನ್ನು ಸುಳಗೋಡಿನಲ್ಲೂ ಮುಂದುವರೆಸಿದ್ದರಾದರೂ ದಾಖಲಾತಿ ಕೊರತೆಯಿಂದ ಶಾಲೆ ಮುಚ್ಚಬಾರದೆಂಬ ಕಾರಣಕ್ಕೆ ಶಾಶ್ವತ ಪರಿಕರ ಕಲ್ಪಿಸಲು ಕ್ರಮ ವಹಿಸಿದರು. ಕುಟುಂಬಸ್ಥರು, ಗ್ರಾಮಸ್ಥರು ಹಾಗೂ ವೈಯಕ್ತಿಕ ಖರ್ಚಿನಿಂದ ಶಾಲೆಗೆ ಪ್ರೊಜೆಕ್ಟರ್, ನಲಿ-ಕಲಿ ಚೇರ್, ಗ್ರೀನ್ ಬೋರ್ಡ್, ಸಿಸಿಟಿವಿ ಕ್ಯಾಮರಾ, ಕಂಪ್ಯೂಟರ್ ವ್ಯವಸ್ಥೆ ಮಾಡಿದರು. 2023-24ನೇ ಸಾಲಿನ'ಲ್ಲಿ ಕಾಂಪೌಂಡ್ ನಿರ್ಮಿಸಿ ಗೋಡೆಗೆ ಬಿತ್ತಿಪತ್ರ ಬರೆಸುವ ಮೂಲಕ ವಿದ್ಯಾರ್ಥಿ ಸ್ನೇಹಿ ವಾತಾವರಣ ಸೃಷ್ಟಿಸಿದ್ದಾರೆ. ಶಾಲೆ ಮುಂಭಾಗ ಚರಂಡಿ ವ್ಯವಸ್ಥೆ ಹಾಳಾಗಿದ್ದನ್ನು ಅರಿತು 33 ಸಾವಿರ ರೂ. ವೈಯಕ್ತಿಕ ಹಣ ಖರ್ಚು ಮಾಡಿ ಸ್ಲ್ಯಾಬ್ ಹಾಗೂ ಕಾಂಕ್ರಿಟ್ ವ್ಯವಸ್ಥೆ ಮಾಡಿದ್ದಾರೆ. ಸರ್ಕಾರಿ ಶಾಲೆಗೆ ಮಕ್ಕಳು ಬಾರದೆ ಇರಲು ಸಾರಿಗೆ ವ್ಯವಸ್ಥೆ ಸಮರ್ಪಕವಾಗಿಲ್ಲ ಎಂಬುದನ್ನು ಅರಿತು ಶಿಕ್ಷಕ ಸ್ವಂತ ವಾಹನ ಹೊಂದುವ ಯೋಚನೆಯನ್ನು ಸಹೋದ್ಯೋಗಿಗಳ ಮುಂದಿಟ್ಟರು. ಅದಕ್ಕೆ ಎಲ್ಲರೂ ಸಕಾರಾತ್ಮಕವಾಗಿ ಸ್ಪಂದಿಸಿದರಾದರೂ ಹಣ ಹಾಗೂ ನಿರ್ವಹಣೆ ಜವಾಬ್ದಾರಿ ಹೇಗೆಂಬ ಪ್ರಶ್ನೆ ಉದ್ಭವವಾಯಿತು. ಅದಕ್ಕೆ ತಲೆ ಕೆಡಿಸಿಕೊಳ್ಳದ ಪುರುಷೋತ್ತಮ್ ಅವರು ಬ್ಯಾಂಕ್‌ನಲ್ಲಿ ಲೋನ್ ಪಡೆದು ವಾಹನ ತರೋಣ. ಚಾಲನೆಯ ಜವಾಬ್ದಾರಿ ನನಗೆ ಬಿಟ್ಟುಬಿಡಿ. ಒಟ್ಟಿನಲ್ಲಿ ಸರ್ಕಾರಿ ಶಾಲೆಯಿಂದ ಮಕ್ಕಳು ವಿಮುಖರಾಗಬಾರದು ಎನ್ನುವುದಷ್ಟೇ ತಮ್ಮ ಧ್ಯೇಯವೆಂದು ಹೇಳಿಬಿಟ್ಟರು. ಎಲ್ಲರೂ ನಿರೀಕ್ಷಿಸಿದಂತೆ ಬ್ಯಾಂಕ್‌ನಲ್ಲಿ ಸರ್ಕಾರಿ ಶಾಲೆಗೆ ಆರ್ಥಿಕ ಸಹಾಯ ದೊರೆಯಲಿಲ್ಲ. ಅದರಿಂದ ವಿಚಲಿತರಾಗದ ಅವರು ಸ್ವತ: 1.50 ಲಕ್ಷ ರೂ., ಸಂಬಂಧಿಕರು ಹಾಗು ಸ್ನೇಹಿತರ ಬಳಿ ಬಡ್ಡಿ ರಹಿತ 3 ಲಕ್ಷ ಸಾಲ ಪಡೆದು ಅಂದುಕೊಂಡಂತೆ ವಾಹನವನ್ನು ತಂದೇ ಬಿಟ್ಟರು. ಸುತ್ತಲಿನ ಮರ್ವೆ, ಮುದ್ದನಹಳ್ಳಿ, ಗರಿಘಟ್ಟ, ಮಂದ್ರ ಗ್ರಾಮಗಳಿಗೆ ನಿತ್ಯ ಬೆಳಿಗ್ಗೆ ತಾವೇ ವಾಹನ ಓಡಿಸಿಕೊಂಡು ಹೋಗಿ ಮಕ್ಕಳನ್ನು ಶಾಲೆಗೆ ಕರೆತರುತ್ತಿದ್ದರು. ಇತ್ತೀಚೆಗೆ ಸಮಯದ ಅಭಾವದಿಂದಾಗಿ ಚಾಲಕನ ನೇಮಿಸಿಕೊಂಡಿದ್ದಾರೆ.

# ಪಡಿತರ ಅಕ್ಕಿ ಅಕ್ರಮ ದಾಸ್ತಾನು: ನಾಲ್ವರ ವಿರುದ್ಧ ದೂರು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ತಾಲ್ಲೂಕಿನ ಬಾಳ್ಳುಪೇಟೆಯ ಜಮ್ಮನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನ್ಯಾಯಬೆಲೆ ಅಂಗಡಿಯ ತೀರ್ಥಕುಮಾರ ಎಂಬುವರಿಗೆ ಸೇರಿದ ಗೋದಾಮಿನಲ್ಲಿ ಅಕ್ರಮವಾಗಿ 660 ಚೀಲ ಪಡಿತರ ಅಕ್ಕಿಯನ್ನು ಸಂಗ್ರಹ ಮಾಡಿದ್ದು ಬಯಲಾಗಿದೆ.

ತಾಲ್ಲೂಕು ಆಹಾರ ಶಿರಸ್ತೇದಾರ್ ದ್ರಾಕ್ಷಾಯಿಣಿ ಅವರು ಖಚಿತ ಮಾಹಿತಿ ಮೇರೆಗೆ ಕಾರ್ಯಾಚರಣೆ ನಡೆಸಿದಾಗ ಅಕ್ರಮ ಬೆಳಕಿಗೆ ಬಂದಿದೆ. ಹಾಸನದ ಕೈಗಾರಿಕಾ ಪ್ರದೇಶದ ಗೋದಾಮಿನಿಂದ 660 ಚೀಲ ಅಕ್ಕಿಯನ್ನು ಪ್ರಮೋದ ಕುಮಾರ ಎಂಬುವರ ರಂಗಸ್ವಾಮಿ ಟ್ರಾನ್ಸ್‌ಪೋರ್ಟ್‌ಗೆ ಸೇರಿದ ಲಾರಿಗೆ ಲೋಡ್ ಮಾಡಿ, ಅಕ್ಕಿಯನ್ನು ಸಕಲೇಶಪುರದ ಗೋದಾಮಿಗೆ ತೆಗೆದುಕೊಂಡು ಹೋಗಲು ಟ್ರಕ್ ಸೀಟ್‌ಗಳನ್ನು ನೀಡಲಾಗಿತ್ತು.

ಆದರೆ ಅಕ್ಕಿ ಚೀಲಗಳನ್ನು ಸಕಲೇಶಪುರಕ್ಕೆ ಸಾಗಿಸಬೇಕಿದ್ದ ಲಾರಿ ಚಾಲಕರು, ಮೋಸ ಮಾಡುವ ಉದ್ದೇಶದಿಂದ ಮಾರ್ಗಮಧ್ಯೆ ಜಮ್ಮನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನ್ಯಾಯಬೆಲೆ ಅಂಗಡಿಯ ಗೋದಾಮಿನಲ್ಲಿ ಅಕ್ರಮವಾಗಿ ದಾಸ್ತಾನು ಮಾಡಿದ್ದರು.

ಇದು ಬಯಲಾದ ನಂತರ ರಂಗನಾಥ ಟ್ರಾನ್ಸ್‌ಪೋರ್ಟ್‌ನ ಪ್ರಮೋದ್ ಕುಮಾರ, ಜಮ್ಮನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ತೀರ್ಥಕುಮಾರ ಹಾಗೂ ಎರಡು ಲಾರಿಗಳ ಚಾಲಕರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕೆಂದು ದ್ರಾಕ್ಷಾಯಿಣಿ ಅವರು ಗ್ರಾಮಾಂತರ ಠಾಣೆಗೆ ದೂರು ದಾಖಲಿಸಿಕೊಂಡಿರುವ ನೀಡಿದ್ದಾರೆ. ಪ್ರಕರಣ ಪೊಲೀಸರು ತನಿಖೆ ಕೈಗೊಂಡಿದ್ದಾರೆ.

# ಪಠ್ಯದಷ್ಟೇ ಪಠ್ಯೇತರ ಚಟುವಟಿಕೆಯಲ್ಲೂ ಸಕ್ರಿಯರಾಗಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಆಲೂರು: ಕಲಿಕೆ ನಾಲ್ಕು ಗೋಡೆಗಳೊಳಗೆ ಸೀಮಿತವಾಗದೇ ಸಾಮುದಾಯಿಕವಾಗಿ ವಿಸ್ತರಣೆಯಾಗಬೇಕಾದರೆ ಪಠ್ಯದಷ್ಟೇ ಪಠ್ಯೇತರ ಚಟವಟಿಕೆಗಳಲ್ಲೂ ಮಗು ಕ್ರಿಯಾಶೀಲವಾಗಿ ತೊಡಗಿಕೊಳ್ಳಬೇಕು ಎಂದು ಸಾಹಿತಿ ಕೊಟ್ರೇಶ್ ಎಸ್. ಉಪ್ಪಾರ್ ಅಭಿಪ್ರಾಯಪಟ್ಟರು.

ಮಗ್ಗೆ-ಕಾರಗೋಡು ಇನ್‌ಸ್ಪೈರ್ ಇಂಟರ್ ನ್ಯಾಷನಲ್ ಶಾಲೆಯಲ್ಲಿ ಹಮ್ಮಿಕೊಂಡಿದ್ದ ಚುನಾಯಿತ ವಿದ್ಯಾರ್ಥಿ ಪ್ರತಿನಿಧಿಗಳ ಅಮಕ್ಕಳ ಸಂಸತ್ತು ಟಿ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿ, ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಮಕ್ಕಳ ಗ್ರಹಿಕೆಗೆ ತರುವಲ್ಲಿ ಶಾಲಾ ಸಂಸತ್ತು ಮಹತ್ತರ ಪಾತ್ರ ವಹಿಸುತ್ತದೆ.

ವಿದ್ಯಾರ್ಥಿ ಚುನಾವಣೆಗಳು ನಾಯಕತ್ವ, ಸೇವಾ ಮನೋಭಾವ ಮುಂತಾದ ಮೌಲ್ಯಗಳನ್ನು ಬಿತ್ತುವುದರೊಂದಿಗೆ ಮಕ್ಕಳನ್ನು ಸಾಮಾಜಿಕ, ಸಾಂಸ್ಕೃತಿಕವಾಗಿ ವಿಕಸನಗೊಳಿಸಲು ಸಹಕಾರಿಯಾಗಿದೆ. ಮಕ್ಕಳು ಕೇವಲ ಪಠ್ಯಕ್ಕೆ ಸೀಮಿತಗೊಳ್ಳದೇ ತರಗತಿಯಾಚೆಯ ಸಾಮಾಜಿಕ ಮೌಲ್ಯಗಳನ್ನು, ಜೀವನ ಕೌಶಲಗಳನ್ನು ಮಕ್ಕಳಲ್ಲಿ ಬೆಳೆಸಲು ಶಾಲೆಯ ಎಲ್ಲಾ ಮಕ್ಕಳಿಗೂ ಸ್ಕೌಟ್ಸ್ ಅಂಡ್ ಗೈಡ್ಸ್ ಶಿಕ್ಷಣ ನೀಡಿ ಮಕ್ಕಳಲ್ಲಿ ಶಿಸ್ತು, ಸಂಯಮ, ಸೇವಾ ಮನೋಭಾವ, ದೇಶಾಭಿಮಾನ ಮುಂತಾದ ಉದಾತ್ತ ಗುಣಗಳನ್ನು ಬೆಳೆಸಬೇಕೆಂಬುದು ಸಂಸ್ಥೆಯ ಮುಖ್ಯಸ್ಥ ಅಶೋಕ್ ಅವರ ಬಹುದೊಡ್ಡ ಕನಸು. ಶಿಕ್ಷಣವೆಂದರೆ ಕೇವಲ ವ್ಯಾಪಾರಿ ದೃಷ್ಟಿಕೋನದಿಂದ ವಿಮರ್ಶಿಸುವ ಇಂದಿನ ಕಾಲಘಟ್ಟದಲ್ಲಿ ಮಕ್ಕಳಲ್ಲಿ ಉತ್ತಮ ಸಂಸ್ಕಾರ ಬಿತ್ತುವುದರ ಜೊತೆಗೆ ಆದರ್ಶ ಪ್ರಜೆಗಳನ್ನಾಗಿ ಮಾಡುವ ನಿಟ್ಟಿನಲ್ಲಿ ಶಾಲಾ ಆಡಳಿತ ಮಂಡಳಿ ಪ್ರಯತ್ನಿಸುತ್ತಿರುವುದು ಸ್ತುತ್ಯಾರ್ಹವಾಗಿದೆ ಎಂದರು.

ಇನ್‌ಸ್ಪೈರ್ ಇಂಟರ್ ನ್ಯಾಷನಲ್ ಶಾಲೆಯ ಕಾರ್ಯದರ್ಶಿ ಅಶೋಕ್ ಮಾತನಾಡಿ, ವಿದ್ಯಾರ್ಥಿಗಳು ಕೇವಲ ಪಠ್ಯಕ್ಕೆ ಸೀಮಿತವಾದರೆ ಸರ್ವಾಂಗೀಣ ಪ್ರಗತಿಯಾಗುವುದಿಲ್ಲ. ತರಗತಿಯೊಳಗೆ ಪ್ರಗತಿಯಿದ್ದಂತೆ ಕ್ರೀಡಾ ಮೈದಾನದಲ್ಲೂ, ಸಾಂಸ್ಕೃತಿಕ ವಲಯದಲ್ಲೂ ಸಕ್ರಿಯವಾದರೆ ಔನತ್ಯ ಸಾಧನೆಗೈಯಲು ಸಹಕಾರಿ. ಸದರಿ ಶೈಕ್ಷಣಿಕ ವರ್ಷ ನಮ್ಮ ಶಾಲೆಯ ಮಕ್ಕಳು ತಾಲ್ಲೂಕು ಹಂತದ ಕ್ರೀಡಾಕೂಟದಲ್ಲಿ ಉತ್ತಮ ಸಾಧನೆ ಮಾಡುವ ಮೂಲಕ ಸಮಗ್ರ ಪ್ರಶಸ್ತಿ ತಂದಿರುವುದು ತುಂಬಾ ಸಂತಸ ನೀಡಿದೆ.

ಶಿಕ್ಷಕರ ಸತತ ಪರಿಶ್ರಮ, ಪೋಷಕರ ಸಹಕಾರದಿಂದ ಯಶಸ್ಸು ದೊರೆತಿದೆ. ಇಲ್ಲಿ ಪೋಷಕರ ಸಂಪೂರ್ಣ ಸಹಕಾರವಿರುತ್ತದೆಯೋ ಅಲ್ಲಿ ಸಾಧನೆಗಳ ಮೈಲುಗಲ್ಲುಗಳು ಮೂಡುತ್ತವೆ. ಮಕ್ಕಳು ಶಾಲೆಯಲ್ಲಿ ಕೇವಲ ಎಂಟುಗಟೆ ಮಾತ್ರ ಇದ್ದರೆ ಬಹುಪಾಲು ಮನೆಯಲ್ಲಿ ಪೋಷಕರೊಂದಿಗೆ ಇರುತ್ತಾರೆ. ಶಿಕ್ಷಕರು ಮಾರ್ಗದರ್ಶಿಸುವ ಅಂಶಗಳನ್ನು ಪಾಲಕರು ಅನುಪಾಲನೆ ಮಾಡಿದಾಗ ಮಾತ್ರ ಮಕ್ಕಳ ಕಲಿಕೆ ಉತ್ತಮ ರೀತಿಯಲ್ಲಿ ಸಾಗಲು ಸಾಧ್ಯ ಎಂದರು.

ಭಾರತ್ ಸ್ಕೌಟ್ಸ್ - ಗೈಡ್ಸ್ ಸಂಸ್ಥೆಯ ರಾಜ್ಯ ಸಹಾಯಕ ಸಂಘಟನಾ ಆಯುಕ್ತೆ ಎಚ್.ಎಂ. ಪ್ರಿಯಾಂಕ ಮಾತನಾಡಿ, ಒಂದೇ ಶಾಲೆಯಲ್ಲಿ 16 ಶಿಕ್ಷಕರಿಗೆ ಸ್ಕೌಟ್ಸ್-ಗೈಡ್ಸ್ ತರಬೇತಿ ನೀಡಿ ಇಡೀ ಶಾಲೆಯ ಎಲ್ಲಾ ವಿದ್ಯಾರ್ಥಿಗಳನ್ನೂ ಸ್ಕೌಟ್ಸ್-ಗೈಡ್ಸ್ ಮಾಡುವ ನಿಟ್ಟಿನಲ್ಲಿ ಶಿಕ್ಷಣ ಸಂಸ್ಥೆ ಇಟ್ಟಿರುವ ಹೆಜ್ಜೆ ಅಭಿನಂದಾರ್ಹವಾಗಿದೆ. ಸ್ಕೌಟ್ಸ್-ಗೈಡ್ಸ್ ಹಮ್ಮಿಕೊಳ್ಳುವ ಜಿಲ್ಲಾ ಪುರಸ್ಕಾರ, ರಾಜ್ಯ ಪುರಸ್ಕಾರ ಹಾಗೂ ರಾಷ್ಟಪತಿ ಪುರಸ್ಕಾರ ಪರೀಕ್ಷೆಗಳಲ್ಲಿ ಉತ್ತೀರ್ಣವಾದ ಮಕ್ಕಳಿಗೆ ಉನ್ನತ ವ್ಯಾಸಂಗವಾದ ಇಂಜೀನಿಯರಿಗ್, ವೈದ್ಯಕೀಯ ಶಿಕ್ಷಣಕ್ಕೆ ಮೀಸಲಾತಿಯಲ್ಲದೇ ರೈಲ್ವೇ ಇಲಾಖೆಯ ನೇಮಕಾತಿಗಳಲ್ಲಿ ಪ್ರತ್ಯೇಕ ಮೀಸಲಾತಿಯಿದೆ. ಸ್ಕೌಟ್ಸ್ ಅಂಡ್ ಗೈಡ್ಸ್ ಮಕ್ಕಳಲ್ಲಿ ಮೌಲ್ಯಗಳನ್ನು ಬಿತ್ತುವುದರ ಜೊತೆಗೆ ವೈಯಕ್ತಿಕ ಲಾಭವನ್ನೂ ತರುತ್ತದೆ ಎಂದರು.

ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ಪೂವಯ್ಯ, ಉಪಾಧ್ಯಕ್ಷ ಸಲೀಂ ಸಿರಾಜ್, ಕಾರ್ಯದರ್ಶಿ ಸದಾನಂದ, ಖಜಾಂಚಿ ನವೀನ್, ಸದಸ್ಯರಾದ ನಂದೀಶ್, ವೆಂಕಟೇಶ್, ಧರ್ಮರಾಜ್, ಹರ್ಷಾ, ರಂಗನಾಥ್, ಸವಿತ ಇತರರಿದ್ದರು.

# ಹೇಮಾವತಿ ಭೂಸಂತ್ರಸ್ತರಿಂದ ಪ್ರತಿಭಟನೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಹೇಮಾವತಿ ಜಲಾಶಯ ಸಂತ್ರಸ್ತರಿಗೆ ಭೂಮಿ ಹಂಚಿಕೆ ಮಾಡಿ ಅಗತ್ಯ ಭೂ ದಾಖಲೆಗಳನ್ನು ನೀಡಬೇಕೆಂದು ಒತ್ತಾಯಿಸಿ ಸಂತ್ರಸ್ತರು ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಹೇಮಾವತಿ ಜಲಾಶಯ ನಿರ್ಮಾಣವಾಗಿ 50 ವರ್ಷ ಕಳೆದರೂ ಪರಿಹಾರ ಸಿಗದೆ ಭೂಮಿ ಕಳೆದುಕೊಂಡವರು ಪರದಾಡುವ ಸ್ಥಿತಿ ನಿರ್ಮಾಣವಾಗಿದೆ. ಸಂತ್ರಸ್ತರಿಗೆ ಭೂಮಿ ನೀಡಿದ್ದರೂ ದರಖಾಸ್ತು ಪೋಡಿ ಮಾಡಿಕೊಡದೆ ಇರುವುದರಿಂದ ಪರಿಹಾರಕ್ಕಾಗಿ ಅಲೆದಾಡುವಂತಾಗಿದೆ.

ಸರ್ಕಾರ ಹಾಗು ಅಧಿಕಾರಿಗಳ ನಿರ್ಲಕ್ಷ್ಯ ಇಷ್ಟು ವರ್ಷ ಕಳೆದರೂ ಸಮಸ್ಯೆ ಪರಿಹರಿಸಲು ಸಾಧ್ಯವಾಗಿಲ್ಲ ಎಂದು ದೂರಿದರು. ಹೆಚ್‌ಆರ್‌ಪಿ ಯೋಜನೆಗೆ ಸಂಬಂಧಿಸಿದ ಅಕ್ರಮಗಳ ತನಿಖೆ ವೇಳೆ 4 ಸಾವಿರ ಸಂತ್ರಸ್ತರ ಮಂಜೂರಾತಿ ಬಗ್ಗೆ ನೈಜತೆ ಇಲ್ಲವೆಂದು ಹೇಳಲಾಗಿದೆ. ಹಲವು ಸಂತ್ರಸ್ತರಿಗೆ ನೋಟೀಸ್ ಕೂಡ ನೀಡಲಾಗಿದೆ. ಜಮೀನು ಮಂಜೂರು ಮಾಡುವ ವೇಳೆ ಅಧಿಕಾರಿಗಳು ಕಣ್ಮುಚ್ಚಿ ಆದೇಶ ಹೊರಡಿಸಿದ್ದಾರೆಯೇ. ಅಧಿಕಾರಿಗಳ ನಿರ್ಲಕ್ಷ್ಯತೆಯಿಂದ ನೈಜ ಸಂತ್ರಸ್ತರು ಸಮಸ್ಯೆ ಎದುರಿಸುವಂತಾಗಿದೆ. ಅಕ್ರಮ ಎಸಗಿರುವ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಂಡು ಅರ್ಹರಿಗೆ ಸೂಕ್ತ ಪರಿಹಾರ ದೊರಕಿಸಿಕೊಡಬೇಕೆಂದು ಒತ್ತಾಯಿದರು.

ಹೆಚ್‌ಆರ್‌ಪಿ ಯೋಜನೆಗೆ ಭೂಮಿ ನೀಡಿದ ಹಲವು ರೈತರಿಗೆ ಇಂದಿಗೂ ಪೋಡಿ ಮಾಡಿಕೊಟ್ಟಿಲ್ಲ. ಈ ಕಾರಣದಿಂದ ರೈತರಿಗೆ ಬ್ಯಾಂಕ್, ಸಹಕಾರ ಸಂಘಗಳಲ್ಲಿ ಸಾಲ ಸೌಲಭ್ಯ, ಬೆಳೆ ಪರಿಹಾರ ಸೇರಿ ಸರ್ಕಾರದ ಯಾವುದೇ ಸೌಲಭ್ಯವನ್ನು ಪಡೆದುಕೊಳ್ಳಲಾಗದೆ ವಂಚಿತರಾಗಿದ್ದಾರೆ. ತ್ವರಿತವಾಗಿ ಪೋಡಿ ಮಾಡಿ ದಾಖಲೆ ನೀಡಬೇಕೆಂದು ಸಂತ್ರಸ್ತರು ಆಗ್ರಹಿಸಿದರು.

ವರ್ಷಾನುಗಟ್ಟಲೇ ಕಚೇರಿಗೆ ಅಲೆದಾಟ ನಡೆದೂ ಪರಿಹಾರ ಸಿಗಲಿಲ್ಲ. ಅಧಿಕಾರಿಗಳ ನಿರ್ಲಕ್ಷ್ಯವೇ ಈ ಸಮಸ್ಯೆಗೆ ಮೂಲ ಕಾರಣವಾಗಿದೆ. ಸರ್ಕಾರ ಹಾಗು ಜಿಲ್ಲಾಡಳಿತ ಈ ಬಗ್ಗೆ ಗಮನ ಹರಿಸುವಂತೆ ಒತ್ತಾಯಿಸಿ ಮನವಿ ಸಲ್ಲಿಸಿದರು.

# ಜ್ಞಾನ, ಪ್ರೇರಣೆ ಮತ್ತು ಸಮಾಜ ಸೇವೆ ಶಿಕ್ಷಕರ ಧ್ಯೇಯ

ಶಿಕ್ಷಕರು ನಮ್ಮ ಜೀವನದಲ್ಲಿ ಬೆಳಕಿನಂತೆ ಬೆಳೆಯುತ್ತಾರೆ. ಅವರು ಕೇವಲ ಪಾಠವನ್ನು ಬೋಧಿಸುವುದರಲ್ಲಿ ಸೀಮಿತರಾಗದೆ, ಜೀವನ ಮೌಲ್ಯಗಳು, ಧೈರ್ಯ, ಸತ್ಯ ನಿಷ್ಠೆ ಮತ್ತು ಮಾನವೀಯತೆಯನ್ನು ರೂಪಿಸುತ್ತಾರೆ. ಭಾರತದಲ್ಲಿ ಸೆ. 5 ಡಾ. ಸರ್ವಪಳ್ಳಿ ರಾಧಾಕೃಷ್ಣನ್ ಅವರ ಜನ್ಮದಿನದಂದು ಶಿಕ್ಷಕರ ದಿನವಾಗಿ ಆಚರಿಸುತ್ತೇವೆ. ಅವರು ಮಹಾನ್ ದಾರ್ಶನಿಕರು, ಶೈಕ್ಷಣಿಕ ತಜ್ಞರು ಮತ್ತು ಭಾರತೀಯ ಗುರುಗಳಾಗಿ ನೆನಪಿನಲ್ಲಿ ಉಳಿದಿದ್ದಾರೆ. ವಿಶ್ವದ ಇತರೆ ಮಹಾನ್ ಗುರುಗಳು ಕೂಡ ಸಮಾಜದಲ್ಲಿ ಅಪಾರ ಸೇವೆ ಮಾಡಿದ್ದಾರೆ. ಸ್ವಾಮಿ ವಿವೇಕಾನಂದ, ಯುವ ಜನರಿಗೆ ಧೈರ್ಯ, ಆತ್ಮ ವಿಶ್ವಾಸ ಮತ್ತು ಜೀವನದ ಮಾರ್ಗದರ್ಶನ ನೀಡಿದರು. ಗೌತಮ ಬುದ್ಧ, ಮಾನವೀಯತೆಯ ಪಾಠ ಮತ್ತು ಶಾಂತಿಯ ಜೀವನ ತೋರಿಸಿದರು. ರಾಮಕೃಷ್ಣ ಪರಮಹಂಸ, ಆತ್ಮಜ್ಞಾನ ಮತ್ತು ಸ್ವಯಂ ವಿಕಾಸದ ಮಹತ್ವವನ್ನು ತಿಳಿಸಿದರು. ಯೇಸು ಕ್ರಿಸ್ತ, ಪ್ರೀತಿ, ಕ್ಷಮಾಶೀಲತೆ ಮತ್ತು ಸತ್ಯನಿಷ್ಠೆಯ ಪಾಠ ನೀಡಿದರು. ಡಾ. ಎ.ಪಿ.ಜೆ. ಅಬ್ದುಲ್ ಕಲಾಂ, ವಿಜ್ಞಾನ, ದೇಶಾಭಿಮಾನ ಮತ್ತು ಯುವಜನರ ಪ್ರೇರಣೆಯಿಂದ ಮಾದರಿಯಾದರು. ಸಾಕ್ರೆಟಿಸ್ ವಿಚಾರ, ತರ್ಕ ಮತ್ತು ತತ್ವಜ್ಞಾನದಲ್ಲಿ ಮಹಾನ್ ಶಿಕ್ಷಕರಾಗಿದ್ದರು. ಇವರು ಜ್ಞಾನ, ಧೈರ್ಯ, ಶ್ರದ್ಧೆ ಮತ್ತು ಪರಿಶ್ರಮದ ಮಹತ್ವವನ್ನು ಸಮಾಜಕ್ಕೆ ತೋರಿಸಿದರು.

21ನೇ ಶತಮಾನದಲ್ಲಿ ಶಿಕ್ಷಕರ ಪಾತ್ರ ಅತ್ಯಂತ ಪ್ರಮುಖವಾಗಿದೆ. ತಂತ್ರಜ್ಞಾನ, ಡಿಜಿಟಲ್ ಉಪಕರಣ, ಇಂಟರ್‌ನೆಟ್ ಮತ್ತು ಗ್ಲೋಬಲ್ ಸಂಪರ್ಕದಿಂದ, ಶಿಕ್ಷಕರು ವಿದ್ಯಾರ್ಥಿಗಳಲ್ಲಿ ನವೀನ ಚಿಂತನೆ, ಸೃಜನಶೀಲತೆ ಮತ್ತು ಸಮಸ್ಯೆ ಪರಿಹಾರ ಶಕ್ತಿಯನ್ನು ಬೆಳಸಬೇಕು. ಭವಿಷ್ಯದ ಶಿಕ್ಷಕರು ಕೇವಲ ಪಾಠ ಹೇಳುವವರಲ್ಲ, ಜೀವನ ಮಾರ್ಗದರ್ಶನ ಮಾಡುವ ಮಾರ್ಗದರ್ಶಕರಾಗಿರಬೇಕು. ಅವರು ಯುವಜನರನ್ನು ಪ್ರೋತ್ಸಾಹಿಸಿ, ಅವರ ಸ್ವಂತ ಶಕ್ತಿಯನ್ನು ಅರಿತುಕೊಳ್ಳಲು ಸಹಾಯ ಮಾಡಬೇಕು. ಜ್ಞಾನ ಹಂಚಿಕೊಳ್ಳುವವರು, ಜೀವನವನ್ನು ರೂಪಿಸುತ್ತಾರೆ ಎಂಬ ಮಾತು ಶಿಕ್ಷಕರ ಮಹತ್ವವನ್ನು ವ್ಯಕ್ತಪಡಿಸುತ್ತದೆ. 21ನೇ ಶತಮಾನದಲ್ಲಿ ಶಕ್ತಿಶಾಲಿ, ಸೃಜನಾತ್ಮಕ, ತಂತ್ರಜ್ಞಾನ ತಿಳಿವಳಿಕೆಯುಳ್ಳ ಶಿಕ್ಷಕರು ಮಾತ್ರ ನಿಜವಾದ ಸಮಾಜ ನಿರ್ಮಾಪಕರು. ಶಿಕ್ಷಕರು ಕೇವಲ ಶಾಲೆಯಲ್ಲಿಯೇ ಅಲ್ಲ, ಸಮಾಜದ ಬೆಳಕಾಗಿ, ಮುಂದಿನ ತಲೆಮಾರಿಗೆ ಪ್ರೇರಣಾ ದೀಪವಾಗಿ ಬದುಕುತ್ತಾರೆ. ಈ ದಿನವು ಶಿಕ್ಷಕರಿಗೆ ಗೌರವ ಸೂಚಿಸುವ, ಅವರ ಸೇವೆ ಮತ್ತು ತ್ಯಾಗವನ್ನು ಸ್ಮರಿಸುವ ದಿನವಾಗಿದೆ.



**- ವಿ. ಅಂತೋಣಿ ಮುತ್ತು, ಶಿಕ್ಷಕ ಹಾಸನ**

# ಕ್ರಿಸ್ತ ಜ್ಯೋತಿ-ಶಾಂತಿ ನಿಕೇತನ ಶಾಲೆಗೆ ಸಮಗ್ರ ಪ್ರಶಸ್ತಿ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಕಲಗೂಡು: ಕ್ರೀಡೆಗಳಲ್ಲಿ ಸೋಲು ಗೆಲುವು ಸಹಜ. ಆದರೆ ಭಾಗವಹಿಸುವಿಕೆ ಅತೀ ಮುಖ್ಯವಾಗಿದೆ. ಶೈಕ್ಷಣಿಕ ಹಂತದಲ್ಲಿ ಸಿಗುವ ಅವಕಾಶಗಳನ್ನು ಸದುಪಯೋಗಪಡಿಸಿಕೊಳ್ಳಬೇಕೆಂದು ಹೊನ್ನವಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಕೃಷ್ಣಮೂರ್ತಿ ತಿಳಿಸಿದರು.

ಪಟ್ಟಣದ ಸರ್ಕಾರಿ ಬಾಲಕರ ಪದವಿ ಪೂರ್ವ ಕಾಲೇಜು ಮೈದಾನದಲ್ಲಿ ಬುಧವಾರ ಆಯೋಜಿಸಿದ್ದ ಹೋಬಳಿ ಮಟ್ಟದ ಪ್ರೌಢಶಾಲೆಗಳ ಕ್ರೀಡಾಕೂಟದಲ್ಲಿ ವಿಜೇತರಾದ ಕ್ರೀಡಾಪಟುಗಳಿಗೆ ಬಹುಮಾನ ವಿತರಣೆ ಮಾಡಿ ಮಾತನಾಡಿದರು.

ವಿದ್ಯಾರ್ಥಿಗಳು ಹೆಚ್ಚು ಸಮಯವನ್ನು ಟಿವಿ ನೋಡುವಲ್ಲಿ ಕಳೆಯಬಾರದು. ದಿನದಲ್ಲಿ ಎರಡು ಗಂಟೆಯಾದರೂ ವ್ಯಾಯಾಮ, ಕ್ರೀಡೆಯಲ್ಲಿ ತೊಡಗಿಕೊಳ್ಳುವುದು ಅತ್ಯವಶ್ಯವಾಗಿದೆ. ಇದು ಕ್ರೀಡೆಯಲ್ಲಿ ಸಾಧನೆ ಮಾಡಲು ಸಹಕಾರಿಯಾಗಲಿದೆ ಎಂದು ಸಲಹೆ ಮಾಡಿದರು.

ಕ್ರೀಡಾಕೂಟದ ಬಾಲಕರ ಸಮಗ್ರ ಪ್ರಶಸ್ತಿಯನ್ನು ಶಾಂತಿನಿಕೇತನ ಶಾಲೆಯ ತಂಡ ಹಾಗೂ ಬಾಲಕಿಯರ ವಿಭಾಗದ ಸಮಗ್ರ ಪ್ರಶಸ್ತಿಯನ್ನು ಕ್ರಿಸ್ತಜ್ಯೋತಿ ಶಾಲೆಯ ತಂಡ ಪಡೆದುಕೊಂಡಿತು.

ಕಾರ್ಯಕ್ರಮದಲ್ಲಿ ಶಾಲಾಭಿವೃದ್ಧಿ ಸಮಿತಿ ಉಪಾಧ್ಯಕ್ಷ ಬಸವರಾಜು, ಸದಸ್ಯರಾದ ಸಣ್ಣದೇವಯ್ಯ, ಯೋಗೇಶ್, ಜಯರಾಮ್, ರವಿಕುಮಾರ್, ಉಪ ಪ್ರಾಂಶುಪಾಲ ಬೋರಣ್ಣಗೌಡ, ಟಿಪಿಒ ನಿಂಗಯ್ಯ, ದೈಹಿಕ ಶಿಕ್ಷಣ ಶಿಕ್ಷಕ ಸಂಜೀವ್‌ಕುಮಾರ್, ಸಹ ಶಿಕ್ಷಕರು ಭಾಗವಹಿಸಿದ್ದರು.

# ಜಿಲ್ಲೆಯಲ್ಲಿ ಕಾಂಗ್ರೆಸ್ ಸಂಘಟನೆಗೆ ಸಕಾಲ: ಸೊರಕೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**




ಹಾಸನ: ಜಾತ್ಯಾತೀತ ಪಕ್ಷ ಎಂದು ಬಿಂಬಿಸಿಕೊಳ್ಳುತ್ತಿದ್ದ ಜೆಡಿಎಸ್‌ನವರು ಬಿಜೆಪಿಯೊಂದಿಗೆ ಸೇರಿಕೊಂಡಿರುವುದರಿಂದ ಜಿಲ್ಲೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಭದ್ರಗೊಳಿಸಲು ಇದು ಸೂಕ್ತ ಕಾಲ ಎಂದು ಮಾಜಿ ಸಚಿವ ವಿನಯ ಕುಮಾರ್ ಸೊರಕೆ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲಾ ಕಾಂಗ್ರೆಸ್ ಮುಖಂಡರಲ್ಲಿ ಭಿನ್ನ ಅಭಿಪ್ರಾಯಗಳು ಇರಬಹುದೇ ವಿನಃ ಪಕ್ಷ ಸಂಘಟನೆಗೆ ಯಾವುದೇ ಸಮಸ್ಯೆಗಳಿಲ್ಲ. ಯಾವ ಕಾರಣಕ್ಕೆ ಹಾಸನ ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ, ಜಿಲ್ಲಾ ಗ್ಯಾರಂಟಿ ಸಮಿತಿ ಅಧ್ಯಕ್ಷರನ್ನು ನೇಮಕ ಮಾಡಿಲ್ಲವೆಂಬುದು ತಿಳಿದಿಲ್ಲ. ಶೀಘ್ರದಲ್ಲೇ ಎಲ್ಲಾ ಗೊಂದಲ ಸರಿಪಡಿಸಿ ಅಧ್ಯಕ್ಷರ ನೇಮಕವಾಗಲಿದೆ ಎಂದು ತಿಳಿಸಿದರು.

ಹೊಸದಾಗಿ ಬಂದಿರುವ ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅವರು ಕ್ರಿಯಾಶೀಲರಾಗಿದ್ದಾರೆ. ಪಕ್ಷ ಸಂಘಟನೆ, ಅಭಿವೃದ್ಧಿ ಕಾರ್ಯಗಳಿಗೆ ಹೆಚ್ಚಿನ ಒತ್ತು ನೀಡಲಿದ್ದಾರೆ. ಹಿಂದೆ ಉಸ್ತುವಾರಿ ಸಚಿವರಾಗಿದ್ದ ಕೆ.ಎನ್. ರಾಜಣ್ಣ ಅವರ ಶ್ರಮದಿಂದಲೂ ಲೋಕಸಭೆ ಚುನಾವಣೆ ಗೆಲ್ಲಲು ಸಾಧ್ಯವಾಗಿದೆ. ಮುಂದಿನ ದಿನಗಳಲ್ಲಿ ಜಿಲ್ಲೆಯಕಲ್ಲಿ ಪಕ್ಷವನ್ನು ಬಲಪಡಿಸಲು ಪ್ರಚಾರ ಸಮಿತಿ ಹೆಚ್ಚು ಕಾರ್ಯ ನಿರ್ವಹಿಸಲಿದೆ ಎಂದರು.

ಕಾಂಗ್ರೆಸ್ ಪ್ರಚಾರ ಸಮಿತಿ ಈ ಹಿಂದೆ ಚುನಾವಣಾ ಪ್ರಚಾರಕ್ಕೆ ಮಾತ್ರ ಸೀಮಿತವಾಗಿತ್ತು. ಪ್ರಸ್ತುತ ವರ್ಷದ 365 ದಿನಗಳ ಕಾಲವೂ ಕಾರ್ಯ ನಿರ್ವಹಿಸುವಂತೆ ರೂಪಿಸಲಾಗಿದೆ. ಪ್ರಚಾರ ಸಮಿತಿಯ ಪದಾಧಿಕಾರಿಗಳನ್ನು ಎಐಸಿಸಿ ಅನುಮೋದಿಸಿದ ನಂತರ ನೇಮಕ ಮಾಡಲಾಗುವುದು. ಜಿಲ್ಲಾ ಮತ್ತು ತಾಲ್ಲೂಕು ಸಮಿತಿ ರಚಿಸುವುದು ಮಾತ್ರವಲ್ಲದೇ ಬೂತ್‌ಮಟ್ಟಕ್ಕೂ ವಿಸ್ತರಿಸಲಾಗುವುದು.

ಪ್ರತಿ ಬೂತ್‌ಗೆ ತಲಾ ಇಬ್ಬರಂತೆ ಒಂದು ಲಕ್ಷಕ್ಕೂ ಹೆಚ್ಚು ಡಿಜಿಟಲ್ ಯುತ್‌ಗಳನ್ನು ಸೇರ್ಪಡೆ ಮಾಡಿಕೊಳ್ಳಲಾಗುವುದು ಎಂದು ಹೇಳಿದರು.

ನಮ್ಮ ಪಕ್ಷದ ಸಿದ್ಧಾಂತಗಳನ್ನು ಕಾರ್ಯಕರ್ತರಿಗೆ ತಿಳಿಸಲು ಕಾರ್ಯಾಗಾರಗಳನ್ನು ನಡೆಸಲಾಗುತ್ತಿದೆ. ಕಾಂಗ್ರೆಸ್ ಬೆಳಗಾವಿ ಅಧಿವೇಶನ ನೂರು ವರ್ಷ ಪೂರೈಸಿದ ಹಿನ್ನಲೆ ಜೈ ಬಾಪು, ಜೈಭೀಮ್, ಜೈ ಸಂವಿಧಾನ ಕಾರ್ಯಕ್ರಮಗಳನ್ನು ರಾಜ್ಯಾದ್ಯಂತ ಹಮ್ಮಿಕೊಳ್ಳಲಾಗಿದೆ.

ಪಕ್ಷದ ಚುನಾವಣಾ ತಂತ್ರಗಾರಿಕೆಗಳನ್ನು ಚುರುಕುಗೊಳಿಸಲು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಅದೇ ರೀತಿ ನಮ್ಮ ಸರ್ಕಾರ ಜಾರಿಗೊಳಿಸಿರುವ ಪಂಚ ಗ್ಯಾರಂಟಿ ಯೋಜನೆಗಳ ಬಗ್ಗೆ ಹೆಚ್ಚಿನ ಪ್ರಚಾರ ಕಾರ್ಯ ನಡೆಸಲಾಗುವುದು. ವಿರೋಧ ಪಕ್ಷದವರು ಗ್ಯಾರಂಟಿ ಯೋಜನೆಗಳ ಬಗ್ಗೆ ಅಪಪ್ರಚಾರ ಮಾಡುತ್ತಿದ್ದಾರೆ, ಈ ಬಗ್ಗೆಯೂ ಗಮನ ಹರಿಸಿ ಪ್ರಚಾರ ಸಮಿತಿಯಿಂದ ಜನರಿಗೆ ಸರ್ಕಾರದ ಯೋಜನೆಗಳನ್ನು ಮನವರಿಕೆ ಮಾಡಿಕೊಡುವ ಜೊತೆಗೆ ಸ್ಪಷ್ಟ ಮಾಹಿತಿ ನೀಡುವ ಕೆಲಸ ಮಾಡಲಾಗುವುದು ಎಂದರು.

ಪ್ರಚಾರ ಸಮಿತಿಯನ್ನು ಬಲಗೊಳಿಸಲು ರಾಜ್ಯಾದ್ಯಂತ ಪ್ರವಾಸ ಮಾಡುತ್ತಿದ್ದೇನೆ. ಈಗಾಗಲೇ 16 ಜಿಲ್ಲೆಗಳ ಪ್ರವಾಸ ಮಾಡಿ ಸಂಘಟನೆಗೊಳಿಸುವ ಕೆಲಸ ನಡೆಯುತ್ತಿದೆ. ಜಿಲ್ಲೆಯಲ್ಲಿ ನಮ್ಮ ಸಮಿತಿಯೊಂದಿಗೆ ಎಲ್ಲಾ ಮುಖಂಡರು, ಕಾರ್ಯಕರ್ತರು ಸಕ್ರಿಯವಾಗಿ ತೊಡಗಿಸಿಕೊಂಡಿರುವುದು ಹೆಚ್ಚು ಸಹಕಾರಿಯಾಗಿದೆ ಎಂದು ತಿಳಿಸಿದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಲಕ್ಷ್ಮಣ್, ಪ್ರಚಾರ ಸಮಿತಿ ಜಿಲ್ಲಾಧ್ಯಕ್ಷ ದೇವರಾಜೇಗೌಡ, ಮುಖಂಡರಾದ ಪದ್ಮಪ್ರಸಾದ್, ರಘು ದಾಸರಕೊಪ್ಪಲು, ಮುನೀರ್ ಮತ್ತಿತರರು ಹಾಜರಿದ್ದರು.

# ಇತಿಹಾಸದಲ್ಲಿ ಈ ದಿನ

## ಸೆಪ್ಟೆಂಬರ್-05

1666: ಲಂಡನ್‌ನಲ್ಲಿ ನಡೆದ ಭೀಕರ ಅಗ್ನಿ ಅವಘಡ ಕೊನೆಗೊಂಡಿತು.

1698: ರಷ್ಯಾದ ಚಕ್ರವರ್ತಿ ಪೀಟರ್ ದಿ ಗ್ರೇಟ್ ದೀರ್ಘಕಾಲದ ಪ್ರವಾಸದ ಬಳಿಕ ರಷ್ಯಾಕ್ಕೆ ಮರಳಿದರು.

1793: ಫ್ರಾನ್ಸ್‌ನಲ್ಲಿ EIGN OF TERROR ಅಧಿಕೃತವಾಗಿ ಆರಂಭವಾಯಿತು.

1839: ಚೀನಾದೊಂದಿಗೆ ನಡೆದ ಮೊದಲ ಅಫಿಯಮ್ ಯುದ್ಧದಲ್ಲಿ ಬ್ರಿಟಿಷ್ ನೌಕಾಪಡೆ ಜಯ ಗಳಿಸಿತು.

1882: ಅಮೇರಿಕಾದ ನ್ಯೂಯಾರ್ಕ್‌ನಲ್ಲಿ ಮೊದಲ ಬಾರಿಗೆ ಲೇಬರ್ ಡೇ ಪೆರೇಡ್ ನಡೆಯಿತು.

1957: ಶೀತಲ ಸಮರ ಸಮಯದಲ್ಲಿ ಅಮೇರಿಕಾದಲ್ಲಿ ಕೋಲ್ಡ್ ವಾರ ಕ್ರೈಸಿಸ್ ಸಂಬಂಧಿತ ಪ್ರಮುಖ ಘಟನೆಗಳು ದಾಖಲಾಗಿವೆ.

1972: ಮುನಿಕ್ ಒಲಿಂಪಿಕ್ಸ್‌ನಲ್ಲಿ ನಡೆದ ಭಯೋತ್ಪಾದಕ ದಾಳಿಯಲ್ಲಿ 11 ಇಸ್ರೇಲಿ ಕ್ರೀಡಾಪಟುಗಳು ಹತ್ಯೆಗೀಡಾದರು.

1965: ಭಾರತದ ದಕ್ಷಿಣ ಏಷ್ಯಾದ ರಾಷ್ಟ್ರ ಪಾಕಿಸ್ತಾನದ ನಡುವೆ ಭಾರೀ ಯುದ್ಧ ನಡೆದಿತ್ತು.

1991: ಭಾರತದ ಪ್ರಮುಖ ಸ್ವಾತಂತ್ರ್ಯ ಹೋರಾಟಗಾರ್ತಿ ಹಾಗೂ ಲೇಖಕಿ ಅಕ್ಕಾಮಹಾದೇವಿಯ ಕುರಿತಾದ ಸಂಶೋಧನೆಗೆ ಹೊಸ ಅಧ್ಯಾಯಗಳು ಪ್ರಾರಂಭವಾದವು.

### ಜನನ

1888: ಡಾ. ಸರ್ವಪಲ್ಲಿ ರಾಧಾಕೃಷ್ಣನ್, ತತ್ವಜ್ಞಾನಿ, ರಾಷ್ಟ್ರಪತಿ

1912: ಕೃಷ್ಣ ಮೇನನ್, ಭಾರತೀಯ ರಾಜಕಾರಣಿ

1946: ಫ್ರೆಡಿ ಮರ್ಕ್ಯುರಿ, ಪ್ರಸಿದ್ಧ ಗಾಯಕ

### ಮರಣ

1568: ಕ್ಯಾಥರಿನ್ ಪಾರ್, ಇಂಗ್ಲೆಂಡ್‌ನ ಹೆನ್ರಿ VIII ರ ರಾಣಿ

2012: ಸಂಜೀವ್ ಕುಮಾರ್, ಭಾರತೀಯ ಚಲನಚಿತ್ರ ನಟ

# ಬಡಮಕ್ಕಳ ಶಿಕ್ಷಣಕ್ಕಾಗಿ ಸ್ವಂತ ಮನೆ ಮಾರಾಟ ಮಾಡಿದ ಅಕ್ಷರ ಸಂತ

## 1 ಕೋಟಿ ರೂ. ಕೂಡಿಟ್ಟ ಗಣಿತ ಮೇಷ್ಟ್ರು ಹೆಚ್.ಎಸ್. ಸುಬ್ರಹ್ಮಣ್ಯ | ಅಕ್ಷರ ಸೇವೆಗೆ ಸಲಾಂ

**ಯಡೇಹಳ್ಳಿ ಆರ್.ಮಂಜುನಾಥ್**

**ಇಂದು ಶಿಕ್ಷಕರ ದಿನಾಚರಣೆ**

ಶ್ರೀಯುತ ಹೆಚ್.ಎಸ್. ಸುಬ್ರಹ್ಮಣ್ಯನವರು ತಮ್ಮ ಸೇವೆಯನ್ನು ಈಶ್ವರನ ಪೂಜೆ ಎಂದು ಭಾವಿಸಿ, ಅಧ್ಯಾಪಕರಾಗಿ, ಸಮಾಲೋಚಕರಾಗಿ, ವೃತ್ತಿ ಮಂಡಳಿಯ ಸದಸ್ಯರಾಗಿ, ಪ್ರಶಸ್ತಿ ಪುರಸ್ಕೃತರಾಗಿ ಗೌರವಧಾರಗಳಿಗೆ ಪಾತ್ರರಾಗಿ, ಪ್ರೀತಿಯ ಪತಿಯಾಗಿ, ಸಮಾಜ ಸೇವಕರಾಗಿ ನಡೆದು ಬಂದವರಾಗಿ, ಶ್ರೀ ಎಂ.ಎನ್. ಚಂದ್ರಲೇಖ, ಸುಬ್ರಹ್ಮಣ್ಯ ಟಾರ್ಟೆಬಲ್ ಟ್ರಸ್ಟ್ ಜೀವಾಳವಾಗಿದ್ದಾರೆ. ಪ್ರೀತಿಯ ಪತ್ನಿಯ ಅಗಲಿಕೆಯ ನಂತರ ಅವರು ದುಡಿದು ಕೂಡಿಟ್ಟ ಸಂಪೂರ್ಣ ಹಣವನ್ನು ಸಮಾಜಕ್ಕೆ ನೀಡುತ್ತಾ ಸಾರ್ಥಕ ಜೀವನದ ಸರಳ ಸಜ್ಜನಿಕೆಯ ಸುಸಂಸ್ಕೃತ ವ್ಯಕ್ತಿ ಎನಿಸಿದ್ದಾರೆ.

ತಮ್ಮ ಅನುಭವದ ನಿಧಿ ನಿಧಾನವನ್ನು ನೀಡುತ್ತಿರುವುದು ಸಮಾಜದ ನಮ್ಮೆಲ್ಲರ ಭಾಗ್ಯವಾಗಿದೆ. ಹಲವು ಹನ್ನೊಂದು ಶಕ್ತಿಗಳ ಋಣ ವಿಶೇಷದಿಂದ ರೂಪಿತವಾದ ಜೀವನವನ್ನು ಆ ಎಲ್ಲಾ ಶಕ್ತಿಗಳ ಋಣ ಸಂದಾಯ ಮಾಡುವುದರೊಂದಿಗೆ ಬಾಳನ್ನು ಸಾರ್ಥಕ ಮಾಡಿಕೊಳ್ಳುತ್ತಿರುವ ಮಹಾನುಭಾವ ಹೆಚ್.ಎಸ್. ಸುಬ್ರಹ್ಮಣ್ಯ ನವರಿಗೆ ಗುರುಪರ ಶಿವನು ಸನ್ಮಂಗಳವನ್ನಿಟ್ಟು ಅನುಗ್ರಹಿಸಲಿ ಎಂದು ಆಶಿಸುಸುತ್ತೇನೆ.




35 ವರ್ಷಗಳ ಸರ್ಕಾರಿ ಶಾಲಾ ಶಿಕ್ಷಕ ಸೇವೆಯ ನಿವೃತ್ತಿಯ ನಂತರ ವಿಶ್ರಾಂತ ಜೀವನ ನಡೆಸುತ್ತಿದ್ದ ಸಂದರ್ಭದಲ್ಲಿ ಪ್ರೀತಿಯ ಪತ್ನಿ ಶ್ರೀಮತಿ ಚಂದ್ರಲೇಖ ಹೃದಯಘಾತದಿಂದ ಅನಿರೀಕ್ಷಿತವಾಗಿ ಇಹಲೋಕ ವ್ಯಾಪಾರ ಮುಗಿಸಿದಾಗ ಸುಬ್ರಹ್ಮಣ್ಯ ವಿಚಲಿತರಾದರು, ಮಾತು ನಿಲ್ಲಿಸಿದರು. ಅಂತರ್ಮುಖಿಯಾಗಿ ಕುಗ್ಗಿ ಹೋದರು. ಸ್ನೇಹಿತರ ಶಿಷ್ಯರ ಒತ್ತಾಸೆಯ ಮೇರೆಗೆ ಒಂದು ನಿರ್ಧಾರಕ್ಕೆ ಬಂದರು. ತಮ್ಮ ಪತ್ನಿ ಸರ್ಕಾರಿ ಸೇವಾ ಶಿಕ್ಷಕಿಯಾಗಿ ಗಳಿಸಿ ಉಳಿಸಿದ್ದ ಹಣವನ್ನು ತಮ್ಮ ಪತ್ನಿಯ ಹೆಸರಲ್ಲೇ ಒಂದು ಟ್ರಸ್ಟ್ ಸ್ಥಾಪಿಸಿ ಶ್ರೀಮತಿ ಎಂ.ಎನ್. ಚಂದ್ರಲೇಖ, ಸುಬ್ರಹ್ಮಣ್ಯ ಚಾರಿಟೇಬಲ್ ಟ್ರಸ್ಟ್ ಎಂದು ನಾಮಕರಣ ಮಾಡಿ, 50 ಲಕ್ಷ ರೂ. ಹಣವನ್ನು ಠೇವಣಿಯಾಗಿರಿಸಿ 2018 ರಿಂದ ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ, ಸಾಂಸ್ಕೃತಿಕ ಕಾರ್ಯಗಳಿಗೆ ವಿನಿಯೋಗಿಸುತ್ತ ಈಗಾಗಲೇ 35 ಲಕ್ಷ ರೂ.ಗಳನ್ನು ಟ್ರಸ್ಟ್‌ನಿಂದ ಸರ್ಕಾರಿ ಶಾಲೆಯ ಮಕ್ಕಳ ವಿದ್ಯಾಭ್ಯಾಸಕ್ಕೆ, ಅಂಗವಿಕಲ ಮಕ್ಕಳ ವಿದ್ಯಾಭ್ಯಾಸಕ್ಕೆ, ಅನಾರೋಗ್ಯ ಪೀಡಿತ ಮಕ್ಕಳ ವೈದ್ಯಕೀಯ ವೆಚ್ಚಕ್ಕೆ, ಪ್ರತಿಭಾನ್ವಿತ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ವಿನಿಯೋಗಿಸುತ್ತಿದ್ದಾರೆ.

ವಿಶೇಷವೆಂದರೆ ಅವರ ನೆಚ್ಚಿನ ಶಿಷ್ಯರನ್ನು ಟ್ರಸ್ಟಿನ ಸದಸ್ಯರನ್ನಾಗಿ ಮಾಡಿ ಸಾರ್ಥಕ ಗುರು ತಂದೆಯಾಗಿ ಮೇಳೈಸಿದ್ದಾರೆ. ಇನ್ನೂ ವಿಶೇಷವೆಂದರೆ ತಮ್ಮ ಪತ್ನಿಗೆ ಬರುತ್ತಿದ್ದ ಪಿಂಚಣಿ ಹಣವನ್ನು ಸೇವಾ ಕಾರ್ಯಗಳಿಗೆ ಬಳಸಲು ಪ್ರಾರಂಭಿಸಿ ನಮ್ಮೆಲ್ಲರಿಗೂ ಗುರು ತಂದೆಯಾಗಿದ್ದಾರೆ.




### ಸ್ವಂತಕ್ಕೆ 20 ಸಾವಿರ ರೂ. ಉಳಿದದ್ದು ಸೇವೆಗೆ

2025ನೇ ಈ ವರ್ಷ ತಮ್ಮ ಎರಡು ಮನೆಗಳಲ್ಲಿ ಒಂದು ಮನೆಯನ್ನು 50 ಲಕ್ಷ ರೂ.ಗೆ ಮಾರಾಟ ಮಾಡಿ, ಎಂ.ಎನ್. ಚಂದ್ರಲೇಖ, ಸುಬ್ರಹ್ಮಣ್ಯ ಚಾರಿಟೇಬಲ್ ಟ್ರಸ್ಟ್‌ಗೆ ಒಂದು ಕೋಟಿ ರೂ. ಠೇವಣಿ ಇಟ್ಟಿದ್ದಾರೆ.

ಗುರುಗಳಿಗೆ ಬರುತ್ತಿದ್ದ 50 ಸಾವಿರ ಪಿಂಚಣಿಯಲ್ಲಿ ಮತ್ತೆ ಇತರೆ ಖರ್ಚುಗಳಿಗೆ 30 ಸಾವಿರ ರೂ. ವಿನಯೋಗಿಸುತ್ತ ನನ್ನ ಬದುಕಿಗೆ 20 ಸಾವಿರ ರೂ. ಸಾಕು ಎಂದು ತೀರ್ಮಾನಿಸಿದ ಏಕೈಕ ಗುರುಗಳು ಎಂಬುದು ನನ್ನ ಭಾವನೆ.

### ಗುರು ಶಿಷ್ಯರ ಸಂಬಂಧಕ್ಕೆ ಸಾಕ್ಷಿ ಪ್ರಜ್ಞೆ

ನೆಚ್ಚಿನ, ಪ್ರೀತಿಯ, ಪ್ರಾಮಾಣಿಕ ಶಿಷ್ಯಂದಿರಾದ ಯಡೇಹಳ್ಳಿ ಆರ್. ಮಂಜುನಾಥ್ ಹಾಗೂ ಬಿ.ಆರ್. ಧರ್ಮಪ್ರಕಾಶ್ ಮತ್ತು ರೂಪಶ್ರೀ ಅವರನ್ನು ಟ್ರಸ್ಟಿನ ಸದಸ್ಯರನ್ನಾಗಿ ಮಾಡಿದ್ದಾರೆ. ಈ ಶಿಷ್ಯಂದ ಟ್ರಸ್ಟಿಗೆ ಒಂದು ರೂಗಳನ್ನು ಕೂಡ ಹಾಕಿಸದಿರುವುದು ಇವರ ಶಿಷ್ಯ ಪ್ರೇಮದ ಹೃದಯ ವೈಶಾಲ್ಯತೆ.

### ವಿದ್ಯಾರ್ಥಿಗಳಿಗೆ ಸಾವಿರಾರು ನೋಟ್‌ಬುಕ್ ವಿತರಣೆ

2025ರ ಶ್ರೀ ಎಂ. ಚಂದ್ರಲೇಖ ಸುಬ್ರಹ್ಮಣ್ಯ ಚಾರಿಟೇಬಲ್ ಟ್ರಸ್ಟ್ , ಜಿಲ್ಲೆಯ 16 ಸರ್ಕಾರಿ ಪ್ರೌಢಶಾಲೆಗಳ ಪ್ರತಿ ವಿದ್ಯಾರ್ಥಿಗಳಿಗೆ 200 ಪೇಜ್‌ನ ತಲಾ ಆರು ಪುಸ್ತಕಗಳಂತೆ ಏಳೂವರೆ ಸಾವಿರ (7500) ನೋಟ್ ಪುಸ್ತಕಗಳ ವಿತರಣಾ ಕಾರ್ಯಕ್ರಮದ ಪಟ್ಟ, ಅರಕಲಗೂಡು ತಾಲ್ಲೂಕಿನ ಶ್ರೀ ಪಟ್ಟಾಭಿರಾಮ ಪ್ರೌಢ ಶಾಲೆಯ 126 ವಿದ್ಯಾರ್ಥಿಗಳಿಗೆ, ಗಂಗೂರು ನೆಹರು ಸ್ಮಾರಕ ಗ್ರಾಮಾಂತರ ಪ್ರೌಢಶಾಲೆಯ 98, ರುದ್ರಪಟ್ಟಣ ಶ್ರೀ ವಿದ್ಯಾಶಂಕರ ಪ್ರೌಢಶಾಲೆಯ 108, ಕಟ್ಟೆಪುರ ಸರ್ಕಾರಿ ಪ್ರೌಢಶಾಲೆಯ 38, ಹನ್ಯಾಳು ಸರ್ಕಾರಿ ಪ್ರೌಢಶಾಲೆಯ 49 ವಿದ್ಯಾರ್ಥಿಗಳಿಗೆ ಒಟ್ಟು 2492 ನೋಟ್ ಪುಸ್ತಕಗಳನ್ನು ವಿತರಿಸಲಾಗಿದೆ.

ಬೇಲೂರಿನ ಸರ್ಕಾರಿ ಹೆಣ್ಣು ಮಕ್ಕಳ ಪ್ರೌಢಶಾಲೆಯ 109 ವಿದ್ಯಾರ್ಥಿನಿಯರು, ಗಬ್ಬಲಗೋಡು ಸರ್ಕಾರಿ ಪ್ರೌಢಶಾಲೆಯ 62, ಮಲ್ಲಾಪುರ ಸರ್ಕಾರಿ ಪ್ರೌಢಶಾಲೆಯ 89, ಹೆಬ್ಬಾಳು ಸರ್ಕಾರಿ ಪ್ರೌಢಶಾಲೆಯ 60 ವಿದ್ಯಾರ್ಥಿಗಳಿಗೆ 1920 ನೋಟ್ ಬುಕ್ ಗಳನ್ನು ವಿತರಿಸಲಾಗಿದೆ. ಹಾಸನ ತಾಲೂಕಿನ ಸರ್ಕಾರಿ ಪ್ರೌಢ ಶಾಲೆ ದುದ್ದ 145 ವಿದ್ಯಾರ್ಥಿಗಳು, ಸರ್ಕಾರಿ ಪ್ರೌಢಶಾಲೆ ಅಟ್ಟಾವರ 46, ಸರ್ಕಾರಿ ಪ್ರೌಢಶಾಲೆ ದೊಡ್ಡಗದ್ದವಳ್ಳಿ 46 ಒಟ್ಟು 1622 ನೋಟ್ ಪುಸ್ತಕಗಳನ್ನು ವಿತರಿಸಲಾಗಿದೆ. ಸಕಲೇಶಪುರ ತಾಲ್ಲೂಕಿನ ಶ್ರೀರಂಗನಾಥ ಪ್ರೌಢಶಾಲೆ ಬಾಳ್ಳುಪೇಟೆ 95, ಬೆಳಗೋಡು ಶಾಲೆಯ 62, ಹೊಂಕರವಳ್ಳಿಯ 55, ಉದಯವಾರ ಶಾಲೆಯ 34 ವಿದ್ಯಾರ್ಥಿಗಳಿಗೆ ಒಟ್ಟು 2476 ನೋಟು ಪುಸ್ತಕಗಳನ್ನು ವಿತರಿಸಲಾಗಿದೆ.

### ಒಂಬತ್ತನೇ ವರ್ಷದ ಕಾರ್ಯಕ್ರಮ ಸೇವೆ

25/08/2025 ರಂದು ಹಾಸನದ ಗಾಯತ್ರಿ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಇಬ್ಬರು ಇಂಜಿನಿಯರಿಂಗ್ ವಿದ್ಯಾರ್ಥಿನಿಯರು, ಇಬ್ಬರು ಎಲ್‌ಎಲ್‌ಬಿ ಪದವಿ ಓದುತ್ತಿರುವ ಆರ್ಥಿಕ ಸಂಕಷ್ಟದಲ್ಲಿರುವ ಬಡ ವಿದ್ಯಾರ್ಥಿನಿಯರಿಗೆ ತಲಾ ಹತ್ತು ಸಾವಿರ ರೂ. ಸಹಾಯಧನ. ಬ್ರೈನ್ ಟ್ಯೂಮರ್ ಅನಾರೋಗ್ಯ ಪೀಡಿತ ಮಗುವಿಗೆ 15000 ರೂ. ಸಹಾಯ ಧನ. ಬೆಳಗೋಡು ಸರ್ಕಾರಿ ಪ್ರಾಥಮಿಕ ಶಾಲೆಗೆ ಲ್ಯಾಪ್ಟಾಪ್ ಕೊಡುಗೆ, 18 ವೃದ್ಧ ದಂಪತಿಗೆ ಗೌರವ ಸಮರ್ಪಣೆ.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248